ಕನ್ನಡಪ್ರಭ
ಬುಧವಾರ 6.05.2026

ಗರಿಷ್ಠ 39°C | ಕನಿಷ್ಠ 28°C

ಸುದ್ದಿ ಸಿಂಚನ

ರಸ್ತೆ ನಿಯಮ ಕಟ್ಟುನಿಟ್ಟಾಗಿ ಪಾಲಿಸಿ: ಪಿಎಸ್‌ಐ ಕೊಟಗಿ

ತಂಬ್ರಹಳ್ಳಿ: ರಸ್ತೆಯ ನಿಯಮಗಳನ್ನು ಕಟ್ಟುನಿಟ್ಟಾಗಿ ಪಾಲಿಸಬೇಕು ಎಂದು ಪಿಎಸ್‌ಐ ನಾಗರಾಜ್ ಕೊಟಗಿ ಹೇಳಿದರು. ಪಟ್ಟಣದಲ್ಲಿ ಸೋಮವಾರ ನಡೆದ ಗ್ರಾಮೀಣ ಮಕ್ಕಳ ಉಚಿತ ಬೇಸಿಗೆ ಶಿಬಿರದ ಕಾರ್ಯಕ್ರಮ ಉದ್ಘಾಟಿಸಿ ಅವರು ಮಾತನಾಡಿದರು. ರಸ್ತೆ ನಿಯಮಗಳನ್ನು ಉಲ್ಲಂಘಿಸಿದರೆ ಅಪಾಯಕ್ಕೆ ಸಿಲುಕುವ ಸಾಧ್ಯತೆ ಇದೆ. ರಸ್ತೆ ಮೇಲೆ ಹೋಗಬೇಕಾದರೆ ನಿಮ್ಮ ಎಡಗಡೆಗೆ ಹೋಗಬೇಕು ಎಂದು ಹೇಳಿದರು.ಈ ಸಂದರ್ಭದಲ್ಲಿ ಪಿಎಸ್‌ಐ ನಾಗರಾಜ್ ಕೊಟಗಿ ಅವರನ್ನು ಸನ್ಮಾನಿಸಲಾಯಿತು. ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿ ಮಾತನಾಡಿದ ನಿವೃತ್ತ ಶಿಕ್ಷಕ ಬಣಕಾರ್‌ಶಿವನಂದಪ್ಪ, ಗ್ರಾಮೀಣ ಮಕ್ಕಳ ಉಚಿತ ಬೇಸಿಗೆ ಶಿಬಿರಗಳು ಬೇಸಿಗೆಯಲ್ಲಿ ಹಮ್ಮಿಕೊಳ್ಳಬೇಕು. ಮಕ್ಕಳಿಗೆ ಬಿಸಿಲಿನಲ್ಲಿ ತಿರುಗಾಡುವುದನ್ನು ಬಿಟ್ಟು ಕಲಿಕೆಯ ಚಟುವಟಿಕೆಯಲ್ಲಿ ಭಾಗವಹಿಸಲು ಸಹಕಾರಿ ಆಗುತ್ತದೆ ಎಂದು ತಿಳಿಸಿದರು. ಮಕ್ಕಳಿಗೆ ಮ್ಯೂಸಿಕಲ್ ಚೇರ್‌ಆಟ ಆಡಿಸಲಾಯಿತು. ಗ್ರಂಥಾಲಯ ಮೇಲ್ವಿಚಾರಕ ಟಿ.ಪಾಂಡುರಂಗ ಮಾತನಾಡಿದರು. ಗ್ರಂಥಾಲಯ ಸಲಹಾ ಸಮಿತಿಯ ಸದಸ್ಯರಾದ ಸುಣಗಾರ ಪರಶುರಾಮ್, ಗದ್ದಿಕೇರಿ ಆಶಾ, ಆರಕ್ಷಕ ಸಿಬ್ಬಂದಿ ಪ್ರಸನ್ನ, ಚಿದಾನಂದಯ್ಯ, ನಾಗರಾಜ್, ಕಡ್ಡಿ ಪ್ರಕಾಶ್ ಇದ್ದರು.

ವಸತಿ ರಹಿತರ ಅರ್ಹ ಫಲಾನುಭವಿಗಳ ಪಟ್ಟಿ ಸೇರ್ಪಡೆಗೆ ಅವಕಾಶ

ಬಳ್ಳಾರಿ: 2018ರ ವಸತಿ ರಹಿತ ಮತ್ತು ನಿವೇಶನ ರಹಿತ ಸಮೀಕ್ಷೆಯ ಪಟ್ಟಿಯಲ್ಲಿ ಬಿಟ್ಟುಹೋಗಿರುವ ಅರ್ಹ ಫಲಾನುಭವಿಗಳನ್ನು ಸೇರಿಸಲು ಹಾಗೂ ಪರಿಷ್ಕರಿಸಲು ಮೇ 15 ಕೊನೆಯ ದಿನವಾಗಿದೆ ಎಂದು ಜಿಪಂ ಸಿಇಒ ಮಹಮ್ಮದ್ ಹಾರೀಸ್ ಸುಮೇರ್ ತಿಳಿಸಿದ್ದಾರೆ. 2018ರಲ್ಲಿ ನಡೆಸಲಾದ ಸಮೀಕ್ಷಾ ಪಟ್ಟಿಯನ್ನು ಪರಿಷ್ಕರಿಸಲು, ಅರ್ಹ ಕುಟುಂಬಗಳನ್ನು ಪಟ್ಟಿಗೆ ಸೇರಿಸಲು ಈಗ ಅವಕಾಶ ಕಲ್ಪಿಸಲಾಗಿದೆ. ಅರ್ಹ ಫಲಾನುಭವಿಗಳ ಹೆಸರನ್ನು ಸೇರಿಸಲು ಮೇ 15 ರವರೆಗೆ ಅಂತಿಮ ಕಾಲಾವಕಾಶ ನೀಡಲಾಗಿದೆ. ಈ ನಿಗದಿತ ದಿನಾಂಕದ ನಂತರ ಯಾವುದೇ ಸೇರ್ಪಡೆಗೆ ಅವಕಾಶವಿಲ್ಲ. ಅಂದೇ ಪಟ್ಟಿಯನ್ನು ಅಂತಿಮಗೊಳಿಸಲಾಗುವುದು. ಮೇ 15ರ ನಂತರ ಸಿದ್ಧವಾಗುವ ಪಟ್ಟಿಯನ್ನೇ ಅಂತಿಮ ವಸತಿ ಮತ್ತು ನಿವೇಶನ ರಹಿತರ ಪಟ್ಟಿ ಎಂದು ಪರಿಗಣಿಸಲಾಗುವುದು. ಅರ್ಹ ಫಲಾನುಭವಿಗಳು ಈ ಬಗ್ಗೆ ಹೆಚ್ಚಿನ ಮಾಹಿತಿಗಾಗಿ ಅಥವಾ ಹೆಸರು ಸೇರ್ಪಡೆಗಾಗಿ ತಮ್ಮ ವ್ಯಾಪ್ತಿಯ ಗ್ರಾಪಂ ಸಿಬ್ಬಂದಿಯನ್ನು ಕೂಡಲೇ ಸಂಪರ್ಕಿಸಬಹುದಾಗಿದೆ. ವಸತಿ ಸೌಲಭ್ಯದಿಂದ ವಂಚಿತರಾ ಇದ ಅರ್ಹ ಕುಟುಂಬಗಳು ಕೂಡಲೇ ಸಂಬಂಧಪಟ್ಟ ದಾಖಲೆಗಳೊಂದಿಗೆ ಗ್ರಾಪಂನ್ನು ಸಂಪರ್ಕಿಸಿ ತಮ್ಮ ಹೆಸರು ಪಟ್ಟಿಯಲ್ಲಿದೆಯೇ ಎಂದು ಖಚಿತಪಡಿಸಿಕೊಳ್ಳಬೇಕು. ಅರ್ಹ ಫಲಾನುಭವಿಗಳನ್ನು ಕೈ ಬಿಟ್ಟಿದ್ದಲ್ಲಿ ಸಂಬಂಧಿಸಿದ ಪಿಡಿಒಗಳನ್ನೇ ನೇರ ಹೊಣೆಗಾರರನ್ನಾಗಿ ಮಾಡಲಾಗುವುದು ಎಂದು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಬಿಜೆಪಿ ವಿಜಯೋತ್ಸವ



ಹೂವಿನಹಡಗಲಿ: ಪಂಚ ರಾಜ್ಯಗಳ ವಿಧಾನಸಭಾ ಚುನಾವಣೆಯಲ್ಲಿ ಪಶ್ಚಿಮ ಬಂಗಾಳ, ಪುದುಚೇರಿ, ಅಸ್ಸಾಂ ರಾಜ್ಯಗಳಲ್ಲಿ ಬಿಜೆಪಿ ಜಯ ಗಳಿಸಿದ ಹಿನ್ನೆಲೆಯಲ್ಲಿ ಇಲ್ಲಿನ ಬಿಜೆಪಿ ತಾಲೂಕು ಘಟದಿಂದ ಕಾಯಕ ಭವನದಲ್ಲಿ ವಿಜಯೋತ್ಸವ ಆಚರಿಸಿದರು. ಈ ಸಂದರ್ಭದಲ್ಲಿ ಬಿಜೆಪಿ ತಾಲೂಕು ಅಧ್ಯಕ್ಷ ಮಲ್ಲಿಕಾರ್ಜುನ ಪೂಜಾರ್, ಈಟಿ ಲಿಂಗರಾಜ, ಆರ್.ಟಿ. ನಾಗರಾಜ, ಲಂಕೇಶ ನಾಯ್ಕ, ಡಿ.ಪುನೀತ್, ಐನಳ್ಳಿ ಭಾಗ್ಯಮ್ಮ ಇದ್ದರು.



ತಂಬ್ರಹಳ್ಳಿ ಪಟ್ಟಣದಲ್ಲಿ ನಡೆದ ಗ್ರಾಮೀಣ ಮಕ್ಕಳ ಉಚಿತ ಬೇಸಿಗೆ ಶಿಬಿರದಲ್ಲಿ ಪಿಎಸ್‌ಐ ನಾಗರಾಜ್ ಕೊಟಗಿ ಅವರನ್ನು ಸನ್ಮಾನಿಸಲಾಯಿತು. ಈ ವೇಳೆ ನಿವೃತ್ತ ಶಿಕ್ಷಕ ಬಣಕಾರ್ ಶಿವಾನಂದಪ್ಪ, ಟಿ.ಪಾಂಡುರಂಗ, ಸುಣಗಾರ ಪರಶುರಾಮ್, ಗದ್ದಿಕೇರಿ ಆಶಾ, ಪ್ರಸನ್ನ, ಚಿದಾನಂದಯ್ಯ ಇದ್ದರು.



ಪಂಚರಾಜ್ಯಗಳ ಚುನಾವಣಾ ಫಲಿತಾಂಶದಲ್ಲಿ ಬಿಜೆಪಿ ಮೇಲುಗೈ ಸಾಧಿಸಿದ ಹಿನ್ನೆಲೆಯಲ್ಲಿ ಕೊಟ್ಟೂರು ಪಟ್ಟಣ ಬಿಜೆಪಿ ಘಟಕದ ಕಾರ್ಯಕರ್ತರು ಮಂಗಳವಾರ ವಿಜಯೋತ್ಸವ ಆಚರಿಸಿ ಸಂಭ್ರಮಿಸಿದರು. ಅಂಗಡಿ ಪಂಪಾಪತಿ, ಬಿ.ಆರ್. ವಿಕ್ರಮ್, ವಿರೇಶಗೌಡ, ಬೋರ್‌ವೆಲ್ ತಿಪ್ಪೇಸ್ವಾಮಿ ಇದ್ದರು.

ಬಿಜೆಪಿಯಿಂದ ವಿಜಯೋತ್ಸವ

• **ಕನ್ನಡಪ್ರಭ ವಾರ್ತೆ** ಕೊಟ್ಟೂರು

ಪಂಚರಾಜ್ಯಗಳ ಚುನಾವಣಾ ಫಲಿತಾಂಶದಲ್ಲಿ ಬಿಜೆಪಿ ಮೇಲುಗೈ ಸಾಧಿಸಿದ ಹಿನ್ನೆಲೆಯಲ್ಲಿ ಕೊಟ್ಟೂರು ಪಟ್ಟಣ ಬಿಜೆಪಿ ಘಟಕದ ಕಾರ್ಯಕರ್ತರು ಮಂಗಳವಾರ ವಿಜಯೋತ್ಸವ ಆಚರಿಸಿ ಸಂಭ್ರಮಿಸಿದರು.

ಈ ಸಂಬಂಧ ಇಲ್ಲಿನ ಬಸ್ ನಿಲ್ದಾಣದ ವೃತ್ತದ ಬಳಿ ಬಿಜೆಪಿ ಕಾರ್ಯಕರ್ತರು ಜಮಾವಣೆಗೊಂಡು ಪಟಾಕಿಗಳನ್ನು ಸಿಡಿಸಿ, ಸಿಹಿ ಹಂಚಿ ವಿಜಯೋತ್ಸವ ಆಚರಿಸಿದರು.

ಪಕ್ಷದ ಕೊಟ್ಟೂರು ಪಟ್ಟಣ ಘಟಕದ ಅಧ್ಯಕ್ಷ ಅಂಗಡಿ ಪಂಪಾಪತಿ ಮಾತನಾಡಿ, ಬಿಜೆಪಿಯ ಈ ಪರಿಯ ಗೆಲುವು ಕಾರ್ಯಕರ್ತರ ಪರಿಶ್ರಮದ ಫಲವಾಗಿದೆ. 2028ಕ್ಕೆ ರಾಜ್ಯದಲ್ಲಿ ಕಮಲ ಅರಳಿಸಲು ಈ ಫಲಿತಾಂಶ ಪ್ರೇರಣೆ ನೀಡಿದೆ ಎಂದರು.

ಮುಖಂಡರಾದ ಬಿ.ಆರ್. ವಿಕ್ರಮ್, ವಿರೇಶಗೌಡ, ಪಪಂ ಮಾಜಿ ಉಪಾಧ್ಯಕ್ಷ ಜಿ. ಸಿದ್ದಯ್ಯ, ಮಾಜಿ ಸದಸ್ಯ ಬೋರ್‌ವೆಲ್ ತಿಪ್ಪೇಸ್ವಾಮಿ ಮಾತನಾಡಿದರು. ಬಸವರಾಜ, ಗಂಗಮ್ಮನಹಳ್ಳಿ ಸಿದ್ದಣ್ಣ, ಮಲ್ಲಿಕಾರ್ಜುನ ಸ್ವಾಮಿ, ವಿಷ್ಣು, ವಿಕಾಸ್, ನವೀನ್, ರುದ್ರೇಶ್ ಸೇರಿದಂತೆ ಹಲವು ಕಾರ್ಯಕರ್ತರು ಭಾಗವಹಿಸಿದ್ದರು.

6 ತಿಂಗಳಾದರೂ ಶುರುವಾಗದ ಕಲ್ಯಾಣದುರ್ಗ ರಸ್ತೆ ಕಾಮಗಾರಿ

ಆಂಧ್ರಕ್ಕೆ ಸಂಪರ್ಕ ಕಲ್ಪಿಸುವ ರಸ್ತೆಗೆ ಇಲ್ಲ ಅಭಿವೃದ್ಧಿ ಯೋಗ | ಲೋಕೋಪಯೋಗಿ ಇಲಾಖೆ ನಿರ್ಲಕ್ಷ್ಯಕ್ಕೆ ಪ್ರಯಾಣಿಕರ ಪರದಾಟ | ಭೂಮಿಪೂಜೆಗಷ್ಟೇ ಸೀಮಿತವಾದ ರಸ್ತೆ ಅಭಿವೃದ್ಧಿ ಕೆಲಸ

• **ಕನ್ನಡಪ್ರಭ ವಾರ್ತೆ** ಬಳ್ಳಾರಿ

ಬಳ್ಳಾರಿಯಿಂದ ಆಂಧ್ರಪ್ರದೇಶದ ಕಲ್ಯಾಣ ದುರ್ಗಕ್ಕೆ ಸಂಪರ್ಕ ಕಲ್ಪಿಸುವ ರಾಜ್ಯ ಹೆದ್ದಾರಿ ಕಾಮಗಾರಿಗೆ ಭೂಮಿಪೂಜೆ ನೆರವೇರಿಸಿ ಬರೋಬ್ಬರಿ ಆರು ತಿಂಗಳು ಕಳೆದಿವೆ. ಆದರೆ, ಈವರೆಗೆ ಕೆಲಸ ಶುರುವಾಗದೇ ಪ್ರಯಾಣಿಕರು ಪರದಾಟುವ ಸ್ಥಿತಿ ನಿರ್ಮಾಣವಾಗಿದೆ.

ಲೋಕೋಪಯೋಗಿ ಇಲಾಖೆಯ ನಿರ್ಲಕ್ಷ್ಯದಿಂದಾಗಿ ಬಳ್ಳಾರಿಯಿಂದ ಬೊಮ್ಮನಹಾಳು, ಕಣೇಕಲ್ ಕ್ರಾಸ್, ಕಲ್ಯಾಣದುರ್ಗ, ಪಾವಗಡ, ಮಡಕಶಿರ, ತುಮಕೂರು ಮಾರ್ಗವಾಗಿ ಬೆಂಗಳೂರು ಕಡೆಗೆ ತೆರಳಬೇಕಾದ ಪ್ರಯಾಣಿಕರು ರಸ್ತೆಯಿಲ್ಲದೇ ಒದ್ದಾಡುವಂತಾಗಿದೆ.

ಬೇರೆ ವಿಧಿಯಿಲ್ಲದೇ ಹಲಕುಂದಿ ಇರ್ದೆಹಾಳು, ನೇಮಕಲ್, ಬೆಂಕಿಕೊಟ್ಟಾಲ್ ಮೂಲಕ ಬೊಮ್ಮನಹಾಳು ಕಡೆಗೆ ಸಾಗಬೇಕಾಗಿದೆ. ಈ ದಾರಿಯಲ್ಲಿ ಸಾಗುವ ಪ್ರಯಾಣಿಕರು ಸುಮಾರು 15 ರಿಂದ 16 ಕಿ.ಮೀ. ಹೆಚ್ಚುವರಿ ಪ್ರಯಾಣ ಮಾಡಬೇಕಾಗಿದೆ. ಬರೀ 6 ಕಿ.ಮೀ. ರಸ್ತೆ ಅಭಿವೃದ್ಧಿ ಕೆಲಸ ಮಾಡಲು ವಿನಾಕಾರಣ ಇಲಾಖೆ ದಿನ ಕಳೆಯುತ್ತಿದ್ದು, ಜನರ ಪರದಾಟ ಮುಂದುವರಿದಿದೆ.

ಸಂಪೂರ್ಣ ಹಾಳಾಗಿದ್ದ ಕಲ್ಯಾಣದುರ್ಗ ರಸ್ತೆಯನ್ನು ಅಭಿವೃದ್ಧಿಪಡಿಸಲು ಕರ್ನಾಟಕ ಗಣಿ ಪರಿಸರ ಪುನಶ್ಚೇತನ ನಿಗಮ (ಕೆಎಂಇಆರ್‌ಸಿ) ಅನುದಾನದಡಿ ₹27 ಕೋಟಿ ನಿಗದಿಗೊಳಿಸಿ, 2025 ಅಕ್ಟೋಬರ್‌ನಲ್ಲಿ ಅಧಿಸೂಚನೆ ಹೊರಡಿಸಿ ನವೆಂಬರ್‌ನಲ್ಲಿ ಭೂಮಿಪೂಜೆ ನೆರವೇರಿಸಲಾಯಿತು. ₹27 ಕೋಟಿಯಲ್ಲಿ 6 ಕಿ.ಮೀ. ರಸ್ತೆಯ ಪೈಕಿ 5 ಕಿ.ಮೀ 10 ಮೀಟರ್‌ಅಗಲ ರಸ್ತೆ ನಿರ್ಮಾಣ, 1 ಕಿ.ಮೀ ಬಳ್ಳಾರಿ ಹೊರ ವಲಯದ ಅಂದ್ರಾಳು ಪೆಟ್ರೋಲ್ ಬಂಕ್‌ನಿಂದ ಬೈಪಾಸ್ ರಸ್ತೆವರೆಗೆ 20 ಮೀಟರ್‌ರಸ್ತೆ ಅಗಲೀಕರಣ ಕೆಲಸವಾಗಬೇಕಿತ್ತು. ಜೊತೆಗೆ ಚರಂಡಿ, ನೀರು ಸಂಪರ್ಕ, ಡಿವೈಡರ್‌ಗಳನ್ನು ನಿರ್ಮಿಸಬೇಕಿತ್ತು. ಇದಕ್ಕೆ 11 ತಿಂಗಳ ಕಾಲ ಸಮಯ ನಿಗದಿಗೊಳಿಸಲಾಗಿತ್ತು. ಆದರೆ, ಈವರೆಗೆ ರಸ್ತೆ ಕಾಮಗಾರಿ ಚಾಲನೆಯೇ ಸಿಕ್ಕಿಲ್ಲ. ಈ ಕುರಿತು ಪ್ರತಿಕ್ರಿಯಿಸುವ ಲೋಕೋಪಯೋಗಿ ಇಲಾಖೆ ಅಧಿಕಾರಿಗಳು, ಈ ಹಿಂದೆ ನಾವು ಕಾಂಕ್ರಿಟ್ ರಸ್ತೆಯನ್ನು ನಿರ್ಮಿಸುವ ಉದ್ದೇಶ ಹೊಂದಿದ್ದೆವು. ಇದಕ್ಕಾಗಿ ಅಗತ್ಯ ಸಿದ್ಧತೆಯನ್ನು ಮಾಡಿಕೊಂಡಿದ್ದೆವು. ಆದರೆ, ಇತ್ತೀಚೆಗೆ ಬಳ್ಳಾರಿಗೆ ಭೇಟಿ ನೀಡಿದ್ದ ಲೋಕೋಪಯೋಗಿ ಇಲಾಖೆಯ ಕಾರ್ಯದರ್ಶಿ ಆಮ್ಲನ್ ಆದಿತ್ಯ ಬಿಸ್ವಾಸ್ ಅವರು ಕಾಂಕ್ರಿಟ್ ರಸ್ತೆ ಬದಲಿಗೆ, ಡಾಂಬರ್‌ರಸ್ತೆಯನ್ನೇ ನಿರ್ಮಿಸುವಂತೆ ಸೂಚನೆ ನೀಡಿದ್ದಾರೆ. ಹೀಗಾಗಿ ವಿಳಂಬವಾಗಿದೆ. ಶೀಘ್ರದಲ್ಲಿಯೇ ಕೆಲಸ ಶುರುಗೊಳಿಸಲಾಗುವುದು ಎಂದು ತಿಳಿಸಿದರು. ಅಧಿಕಾರಿಗಳ ಕಾಲಹರಣದಿಂದಾಗಿಯೇ ಈ ರಸ್ತೆಯಲ್ಲಿ ನಿತ್ಯ ಓಡಾಡುವ ಪ್ರಯಾಣಿಕರು ಒದ್ದಾಟ ಅನುಭವಿಸುವಂತಾಗಿದ್ದು, ಜಿಲ್ಲಾಡಳಿತ ಗಮನ ಹರಿಸಬೇಕು. ಪ್ರಯಾಣಿಕರಿಗೆ ಸಮಸ್ಯೆಯಾಗದಂತೆ ಕೆಲಸಕ್ಕೆ ವೇಗ ನೀಡಬೇಕು ಎಂದು ಸಾರ್ವಜನಿಕರು ಆಗ್ರಹಿಸಿದ್ದಾರೆ.



ಬಳ್ಳಾರಿಯಿಂದ ಆಂಧ್ರದ ಕಲ್ಯಾಣದುರ್ಗಕ್ಕೆ ಸಂಪರ್ಕ ಕಲ್ಪಿಸುವ ದಾರಿ ಸಂಪೂರ್ಣ ಹಾಳಾಗಿದ್ದು ಪ್ರಯಾಣಿಕರು ಅನಿವಾರ್ಯವಾಗಿ ಇದೇ ದಾರಿಯಲ್ಲಿ ಓಡಾಡುವಂತಾಗಿದೆ.

> **ಬಳ್ಳಾರಿ-ಕಲ್ಯಾಣದುರ್ಗ ರಸ್ತೆ ಸಂಪೂರ್ಣ ಹಾಳಾಗಿದ್ದು ಪ್ರಯಾಣಿಕರು ನಿತ್ಯ ಪರದಾಡುತ್ತಿದ್ದಾರೆ. ಅನೇಕರು ಗೊತ್ತಿಲ್ಲದೇ ಈ ರಸ್ತೆಗೆ ಬಂದರೆ ನರಕಯಾತನೆ ಅನುಭವಿಸಬೇಕು. ರಣ ಬಿಸಿಲಿನಲ್ಲಿ 6 ಕಿ.ಮೀ. ದಾಟುವ ಹೊತ್ತಿಗೆ ಹೈರಾಣಾಗುತ್ತಾರೆ.**
>
> • **ರಾಜೇಂದ್ರಕುಮಾರ್**
> ಎತ್ತಿನಬೂದಿಹಾಳು ನಿವಾಸಿ, ಬಳ್ಳಾರಿ ತಾಲೂಕು

ಬೇಸಿಗೆ: ಹಂಪಿಯಲ್ಲಿ ನೀರು ಸಿಗದೇ ಕೋತಿಗಳ ಪರದಾಟ

• **ಸಿ.ಕೆ. ನಾಗರಾಜ**
ಕನ್ನಡಪ್ರಭ ವಾರ್ತೆ ಹೊಸಪೇಟೆ

ವಿಶ್ವವಿಖ್ಯಾತ ಹಂಪಿಯಲ್ಲಿ ಕೇವಲ ಐತಿಹಾಸಿಕ ಸ್ಮಾರಕಗಳಲ್ಲಷ್ಟೇ ಅಲ್ಲದೇ ಅನೇಕ ವೈವಿಧ್ಯತೆಯ ಪ್ರಾಣಿಗಳಾದ ಚಿರತೆ, ಕರಡಿ, ನವಿಲು, ಮೊಸಳೆ, ನೀರುನಾಯಿ ಸೇರಿದಂತೆ ನಾನಾ ಪ್ರಾಣಿಗಳು, ಪಕ್ಷಿಗಳನ್ನು ಕಾಣಬಹುದು. ಕೋತಿಗಳ ದಂಡು ಸುಮಾರು ಸಾವಿರ ಸಂಖ್ಯೆಯಲ್ಲಿ ಕಂಡು ಬರುತ್ತಿವೆ.

ದೇವಸ್ಥಾನಕ್ಕೆ ಬರುವ ಭಕ್ತರು ಮತ್ತು ಪ್ರವಾಸಿಗರು ತರುವ ತೆಂಗಿನಕಾಯಿ, ಬಾಳೆಹಣ್ಣುಗಳನ್ನು ದೇವರಿಗೆ ಸಮರ್ಪಿಸುವ ಮುನ್ನವೇ ವಾನರರ ಗುಂಪು ಬಂದು ಅವುಗಳನ್ನು ಕಿತ್ತುಕೊಂಡು ಓಡಿ ಹೋಗುತ್ತವೆ. ಅಷ್ಟೊಂದು ದೊಡ್ಡ ಸಂಖ್ಯೆಯಲ್ಲಿ ವಾನರರ ದಂಡು ಹಂಪಿಯಲ್ಲಿ ಕಂಡು ಬರುತ್ತವೆ.


ಈ ಮಂಗಗಳಿಗೆ ಹೊಟ್ಟೆ ತುಂಬಿಸಿಕೊಳ್ಳುವ ಚಿಂತೆ ಒಂದು ಕಡೆಯಾದರೆ, ಬಾಯಾರಿಕೆಗೆ ಕುಡಿಯುವ ನೀರಿಗಾಗಿ ಪರದಾಡುವುದು ಮತ್ತೊಂದು ಚಿಂತೆಯಾಗಿದೆ. ಈಗ ಬಿರು ಬೇಸಿಗೆಯ ಬಿಸಿಲಿಗೆ ಕಂಗಾಲಾಗಿ ದಾಹ ನೀಗಿಸಿಕೊಳ್ಳಲು ದೇವಸ್ಥಾನದ ಅಭಿಷೇಕದ ನೀರು ಕುಡಿದು ಕೆಲವು ದಣಿವಾರಿಸಿಕೊಳ್ಳುತ್ತವೆ.

ಮತ್ತೆ ಕೆಲವು ದೇವಸ್ಥಾನದ ಪಕ್ಕದಲ್ಲಿರುವ ಪುಷ್ಕರಣೆಯ ನೀರು, ಇನ್ನು ಕೆಲವು ದೇವಸ್ಥಾನದ ಪಕ್ಕದಲ್ಲೇ ಹರಿಯುತ್ತಿರುವ ತುಂಗಭದ್ರಾ ನದಿಗೆ ತೆರಳಿ ದಾಹ ನೀಗಿಸಿಕೊಳ್ಳುತ್ತಿವೆ.

ಇನ್ನು ಕೆಲ ವಾನರರ ದಂಡು ಆಹಾರ ಹುಡುಕುವ ಜೊತೆಗೆ ದಾಹ ನೀಗಿಸಿಕೊಳ್ಳುವುದಕ್ಕಾಗಿ ದೇವಸ್ಥಾನ ಬಿಟ್ಟು ಹಂಪಿಯ ಪಕ್ಕದಲ್ಲೇ ಇರುವ ಬಾಳೆತೋಟದ ಮೂಲಕ ಕಮಲಾಪುರ ಭಾಗಕ್ಕೆ ಆಗಮಿಸಿ ಮನೆಗಳ ಮುಂದೆ ಇರುವ ನೀರಿನ ಸಂಪ್‌ಗಳಲ್ಲಿ ನೀರು ಕುಡಿಯುತ್ತವೆ. ತೆರೆದ ನೀರಿನ ಸಂಪ್ ನಲ್ಲೇ ಈಜಾಡುತ್ತಾ ಮೋಜು-ಮಸ್ತಿ ಮಾಡುತ್ತಿವೆ.

ಕಾಡಿನಲ್ಲಿ ನೀರಿನ ಕೊರತೆ ಹೆಚ್ಚಾಗುತ್ತಿದ್ದಂತೆ ದಾಹದಿಂದ ಬಳಲಿದ ವಾನರರ ದಂಡು ನಗರ, ಪಟ್ಟಣದತ್ತ ಮುಖ ಮಾಡುತ್ತಿವೆ.

ಅರಣ್ಯ ಇಲಾಖೆಯವರು ಕುರುಚಲು ಕಾಡು ಪ್ರದೇಶದಲ್ಲಿ ಪ್ರಾಣಿಗಳಿಗಾಗಿ ನೀರಿನ ವ್ಯವಸ್ಥೆ ಮಾಡಬೇಕಿದೆ. ಈ ವ್ಯವಸ್ಥೆ ಇಲ್ಲದ ಕಾರಣ ದಾಹ ತೀರಿಸಿಕೊಳ್ಳುವುದಕ್ಕೆ ಪರದಾಡುತ್ತಿವೆ.



ಕಮಲಾಪುರದ ನೀರಿನ ಸಂಪ್‌ನಲ್ಲಿ ಮಂಗಗಳು ಈಜಾಡುತ್ತಿರುವುದು.

> **ಬೇಸಿಗೆ ಕಾಲದಲ್ಲಿ ಕೋತಿಗಳು ಹಿಂಡು ಹಿಂಡಾಗಿ ಆಹಾರ, ಕುಡಿಯುವ ನೀರು ಹುಡುಕಿಕೊಂಡು ನಮ್ಮ ಊರಿನತ್ತ ಬರುತ್ತವೆ. ನಮ್ಮ ಮನೆಯ ಮುಂದೆ ದೊಡ್ಡದೊಂದು ನೀರಿನ ಸಂಪ್ ಇದೆ. ಈ ಸಂಪ್‌ಗೆ ನಿತ್ಯ ಹತ್ತಾರು ಕೋತಿಗಳು ಬಂದು ನೀರು ಕುಡಿದು ಹೋಗುತ್ತಿವೆ. ನೀರು ಕುಡಿದಾದ ಮೇಲೆ ದಣಿವು ಆರಿಸಿಕೊಳ್ಳಲು ನೀರಿನಲ್ಲಿ ಮುಳಗಿ ಬಿಸಿನ ತಾಪ ಕಡಿಮೆ ಮಾಡಿಕೊಳ್ಳುತ್ತವೆ.**
>
> • **ಪೂಜಾರ್ ಗಣೇಶ್**
> ಕಮಲಾಪುರ ನಿವಾಸಿ

ಕ್ಷೇತ್ರದ ಅಭಿವೃದ್ಧಿಗೆ ಭೀಮಾ ನಾಯ್ಕ ಕೊಕ್ಕೆ: ನೇಮರಾಜ

• **ಕನ್ನಡಪ್ರಭ ವಾರ್ತೆ** ಹಗರಿಬೊಮ್ಮನಹಳ್ಳಿ

ಮಾಜಿ ಕಾಂಗ್ರೆಸ್ ಶಾಸಕ ಭೀಮಾನಾಯ್ಕ ಅವರಿಂದಲೇ ಕ್ಷೇತ್ರದಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ ಹೆಸರು ದುರ್ಬಳಕೆಯಾಗುತ್ತಿದೆ. ಪೊಲೀಸ್ ಇಲಾಖೆಯ ಆಯಕಟ್ಟಿನ ಸ್ಥಳಗಳಲ್ಲಿ ಭ್ರಷ್ಟ ಅಧಿಕಾರಿಗಳ ನೇಮಕ ಮಾಡುವ ಮೂಲಕ ಮಟಕಾ, ಐಪಿಎಲ್ ಬೆಟ್ಟಿಂಗ್ ಮತ್ತು ಕ್ಯಾಸಿನೋಗಳಂತಹ ಕಾಳ ದಂಧೆಕೋರರಿಗೆ ನೆರವಾಗಿದ್ದಾರೆ ಎಂದು ಶಾಸಕ ನೇಮರಾಜ್ ನಾಯ್ಕ ಆರೋಪಿಸಿದ್ದಾರೆ.

ತಾಲೂಕಿನ ಮಾಲವಿ ಗ್ರಾಮದ ಬಳಿ ಇರುವ ಹಗರಿಬೊಮ್ಮನಹಳ್ಳಿ ಜಲಾಶಯದ ಕ್ರಸ್ಟ್‌ಗೇಟ್ ಅಳವಡಿಕೆ ಕಾಮಗಾರಿಯನ್ನು ಮಂಗಳವಾರ ಪರಿಶೀಲಿಸಿದ ಬಳಿಕ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಕ್ಷೇತ್ರದ ಅಭಿವೃದ್ಧಿಗೆ ಕೊಕ್ಕೆ ಹಾಕುತ್ತಿರುವ ಬೀಮಾ ನಾಯ್ಕರಿಗೆ ನನ್ನ ಕುರಿತು ಮಾತಾಡುವ ನೈತಿಕತೆ ಇಲ್ಲ ಎಂದು ವಾಗ್ದಾಳಿ ನಡೆಸಿದರು. ಹ್ಯಾಬಿಟೇಟ್ ಸಂಸ್ಥೆ ಮೂಲಕ ಕೈಗೆತ್ತಿಕೊಳ್ಳಲಾಗಿರುವ ಕಾಮಗಾರಿಗಳಲ್ಲಿ ₹100 ಕೋಟಿ ಅನುದಾನ ಲೂಟಿಯಾಗಿದೆ ಎಂದು ಆರೋಪಿಸುತ್ತಿರುವ ಭೀಮಾನಾಯ್ಕ ಒಬ್ಬ ಮಾನಸಿಕ ಅಸ್ವಸ್ಥ. ಕೇವಲ ಮೂರು ವರ್ಷಗಳಲ್ಲಿ ಕ್ಷೇತ್ರ ವ್ಯಾಪ್ತಿಯಲ್ಲಿ ನಡೆದಿರುವ ಅಭಿವೃದ್ಧಿ ಕಂಡು ಸಹಿಸಲಾಗದೇ ನಾನು ಪರ್ಸಂಟೇಜ್ ವ್ಯವಹಾರ ನಡೆಸುತ್ತಿದ್ದೇನೆ ಎಂದು ಆರೋಪಿಸುವ ಬದಲು ಕಾಮಗಾರಿಗಳಲ್ಲಿ ಕಳಪೆ ಇದ್ದರೆ ತನಿಖೆ ನಡೆಸಲಿ. ಇವರದ್ದೇ ಸರ್ಕಾರ ಇದೆಯಲ್ಲ ಎಂದು ಕಾಲೆಳೆದರು.

ಹ್ಯಾಬಿಟೇಟ್ ಮೂಲಕ ನಡೆದಿರುವ ಕಾಮಗಾರಿಗಳ ಗುಣಮಟ್ಟ ಕುರಿತು ಕೆಕೆಆರ್‌ಡಿಬಿ ಕಾರ್ಯದರ್ಶಿಗಳೇ ಮೆಚ್ಚುಗೆ ಸೂಚಿಸಿದ್ದಾರೆ. ಯಾವುದೇ ತುಂಡು ಗುತ್ತಿಗೆ ಕಾಮಗಾರಿಗಳನ್ನು ನಮ್ಮ ಕಾರ್ಯಕರ್ತರು ನಿರ್ವಹಿಸಿಲ್ಲ ಎಂದು ಅವರು ಸ್ಪಷ್ಟಪಡಿಸಿದರು.

ಕ್ಷೇತ್ರದ ಅಭಿವೃದ್ಧಿಗೆ ರಾಜ್ಯ ಸರ್ಕಾರ ಬಿಡಿಗಾಸೂ ಒದಗಿಸುತ್ತಿಲ್ಲ ಎಂದು ಪುನರುಚ್ಚರಿಸಿದ ಅವರು, ಕೇಂದ್ರದ ಅಮೃತ್ ಯೋಜನೆ, ಡಿಎಂಎಫ್ ಹಾಗೂ ಕೆಎಂಆರ್‌ಇಸಿ ಮೂಲಕ ಅನುದಾನ ಪಡೆದು ಕ್ಷೇತ್ರದ ಅಭಿವೃದ್ಧಿಗೆ ಒತ್ತು ನೀಡಲಾಗಿದೆ. ಹಾಳಾಗಿರುವ ರಸ್ತೆಗಳ ಸಮೀಕ್ಷೆ ನಡೆಸಿ ಅಭಿವೃದ್ಧಿಗೆ ₹49ಕೋಟಿ ಅನುದಾನ ಒದಗಿಸಲಾಗಿದೆ. ನವೆಂಬರ್‌ನಲ್ಲಿ ₹4.30ಕೋಟಿ ಅನುದಾನ ಒದಗಿಸಿ ಪ್ರಾರಂಭಿಸಿದ್ದ ಜಲಾಶಯದ ಕ್ರಸ್ಟ್‌ಗೇಟ್ ಕಾಮಗಾರಿ ಅಳವಡಿಕೆ ಮುಗಿದಿದೆ. ₹2 ಕೋಟಿ ಅನುದಾನದಲ್ಲಿ ಜಲಾಶಯದ ಎಡ, ಬಲ ದಂಡೆಗಳನ್ನು ಸುಸ್ಥಿರಗೊಳಿಸಿ 2 ಟಿಎಂಸಿ ನೀರನ್ನು ಸಂಗ್ರಹಿಸಿ ಮುಂದಿನ ಮಳೆಗಾಲದಲ್ಲಿ ರೈತರ ಜಮೀನುಗಳಿಗೆ ನೀರುಣಿಸಲಾಗುತ್ತದೆ ಎಂದು ವಿವರಿಸಿದರು.

ತಹಸೀಲ್ದಾರ್‌ಕವಿತಾ, ನೀರಾವರಿ ಇಲಾಖೆಯ ಎಇಇ ಧರ್ಮರಾಜ್, ಜಿಲ್ಲಾ ಜೆಡಿಎಸ್ ಅಧ್ಯಕ್ಷ ಬಾದಾಮಿ ಮೃತ್ಯುಂಜಯ, ತಾಲೂಕು ಅಧ್ಯಕ್ಷ ವೈ. ಮಲ್ಲಿಕಾರ್ಜುನ, ಜಿಲ್ಲಾ ಉಪಾಧ್ಯಕ್ಷ ಕೃಷ್ಣಮೂರ್ತಿ, ಮುಖಂಡರಾದ ಜಿ.ಎಂ. ಜಗದೀಶ್, ಹೋಟೆಲ್ ಸಿದ್ಧರಾಜು, ಚಿತ್ತವಾಡಗಿ ಪ್ರಕಾಶ್, ನರೇಗಲ್ ಕೊಟ್ರೇಶ್, ನರೇಗಲ್ ಬಸವರಾಜ್, ಪುರಸಭಾ ಸದಸ್ಯರಾದ ದೀಪಕ್ ಕಠಾರೆ, ನಾಗರಾಜ ಜನ್ನು ಇದ್ದರು.



ಹಗರಿಬೊಮ್ಮನಹಳ್ಳಿ ಜಲಾಶಯದ ಕ್ರಸ್ಟ್‌ಗೇಟ್ ಅಳವಡಿಕೆ ಕಾಮಗಾರಿಯನ್ನು ಶಾಸಕ ನೇಮರಾಜ್ ನಾಯ್ಕ ಮಂಗಳವಾರ ಪರಿಶೀಲಿಸಿದರು.

ಸನ್ಮಾನ... | ಶಿಕ್ಷಕರ ಸಂಘದ ಚುನಾವಣೆಯಲ್ಲಿ ಜಯಶೀಲರಾದ ಶಿಕ್ಷಕರಿಗೆ ಅಭಿನಂದನೆ

ಶಿಕ್ಷಕರ ಸಂಘದ ಅಭಿವೃದ್ಧಿಗೆ ಶ್ರಮಿಸಿ

• **ಕನ್ನಡಪ್ರಭ ವಾರ್ತೆ** ಹರಪನಹಳ್ಳಿ


ಪ್ರಾಥಮಿಕ ಶಾಲಾ ಶಿಕ್ಷಕರ ಸಂಘದ ಚುನಾವಣೆಯಲ್ಲಿ ಗೆಲುವು ಸಾಧಿಸಿದ ಪ್ರಗತಿಪರ ಶಿಕ್ಷಕರ ವೇದಿಕೆಯ ಎಲ್ಲ ಶಿಕ್ಷಕರು ಸಂಘದ ಶ್ರೇಯೋಭಿವೃದ್ಧಿಗೆ ಶ್ರಮಿಸಿ ಎಂದು ತಾಲೂಕು ವಕೀಲರ ಸಂಘದ ಅಧ್ಯಕ್ಷ ಟಿ. ವೆಂಕಟೇಶ್ ಹೇಳಿದರು.

ಶಿಕ್ಷಕರ ಸಂಘದ ಚುನಾವಣೆಯಲ್ಲಿ ಜಯಶೀಲರಾದ ಪ್ರಗತಿಪರ ಶಿಕ್ಷಕರ ವೇದಿಕೆಯ ಶಿಕ್ಷಕರಿಗೆ ನಗರದಲ್ಲಿ ಸೋಮವಾರ ಹಮ್ಮಿಕೊಂಡಿದ್ದ ಅಭಿನಂದನಾ ಸಮಾರಂಭದಲ್ಲಿ ಪಾಲ್ಗೊಂಡು ಅವರು ಮಾತನಾಡಿದರು.

ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಎಂ.ವಿ. ಅಂಜಿನಪ್ಪ ಮಾತನಾಡಿ, ಚುನಾವಣೆ ಎನ್ನುವುದು ಸಂವಿಧಾನದಲ್ಲಿನ ಒಂದು ಭಾಗ. ಗೆದ್ದವರು ಪ್ರಗತಿಗೆ ಶ್ರಮಿಸಿದರೆ, ಸೋತವರು ಮುಂದೆ ಹೇಗೆ ಗೆಲ್ಲಬೇಕು ಎನ್ನುವ ಕುರಿತು ತಂತ್ರಗಾರಿಕೆ ನಡೆಸಬೇಕೇ ಹೊರತು ಅಪಪ್ರಚಾರಕ್ಕೆ ಇಳಿಯಬಾರದು ಎಂದರು.

ಪ್ರಗತಿಪರ ವೇದಿಕೆ ಮುಖಂಡ ಬಸವರಾಜ್ ಸಂಗಪ್ಪನವರ್ ಮಾತನಾಡಿದರು. ಪುರಸಭೆ ಮಾಜಿ ಉಪಾಧ್ಯಕ್ಷ ಎಚ್. ವಸಂತಪ್ಪ, ಶಿಕ್ಷಕರ ಸಂಘದ ಮಾಜಿ ಅಧ್ಯಕ್ಷ ಮಂಜುನಾಥ್ ಮಾತನಾಡಿದರು.

ಶಿಕ್ಷಕರ ಸಂಘದ ಚುನಾವಣೆಯಲ್ಲಿ ಗೆದ್ದ ಶಿಕ್ಷಕರಿಗೆ ಸನ್ಮಾಸಿ ಗೌರವಿಸಲಾಯಿತು. ಸಂಘದ ಅಧ್ಯಕ್ಷ ಎಂ.ಪ್ರಭು, ಸರ್ಕಾರಿ ನೌಕರರ ಸಂಘದ ಮಾಜಿ ಅಧ್ಯಕ್ಷ ಎಸ್. ರಾಮಪ್ಪ, ಬಿ.ರಾಜಶೇಖರ್, ಎಂ. ಚಂದ್ರಮೌಳಿ, ಪದ್ಮರಾಜ್ ಜೈನ್, ಜಿ.ಪದ್ಮಲತಾ, ದಾದಾ ಕಲಂದರ್, ಸೊಪ್ಪಿನ ಹನುಮಂತಪ್ಪ, ಸಾರಥಿ ಹನುಮಂತಪ್ಪ, ಬಂಡಿ ಬಸವರಾಜ, ಗುರುಪ್ರಸಾದ್, ಹರೀಶ್, ಕೊಟ್ರೇಶಪ್ಪ, ಬಡಗಿ ಮೊಹಬುಬ್ ಸಾಹೇಬ್, ಮನ್ಸೂರ್‌ಅಹಮ್ಮದ್, ಎಂ. ರಮೇಶ್, ಎಸ್.ಶಿವಯೋಗಿ, ಜಿ.ಬಂದಮ್ಮ, ಎಂ.ಗಿರಿಜಾ, ಹೇಮಾವತಿ, ಕೊಟ್ರಮ್ಮ, ಎಸ್,ಶಾಂತಮ್ಮ, ಎಚ್.ವಿಜಯಲಕ್ಷ್ಮಿ, ಎಲ್.ಮಜ್ಯಾನಾಯ್ಕ್ ಇದ್ದರು.



ಹರಪನಹಳ್ಳಿಯಲ್ಲಿ ಶಿಕ್ಷಕರಿಗೆ ಅಭಿನಂದನಾ ಸಮಾರಂಭ ಏರ್ಪಡಿಸಲಾಯಿತು.

ಕುತೂಹಲ | ನಾರಿಹಳ್ಳ ದಂಡೆಯ ಬಳಿ ಶಾಸನ ಪತ್ತೆ

ಅಪರೂಪದ ಶಾಸನ ಪತ್ತೆ

• **ಕನ್ನಡಪ್ರಭ ವಾರ್ತೆ** ಕಂಪ್ಲಿ

ತಾಲೂಕಿನ ಹಂಪಾದೇವನಹಳ್ಳಿಯಲ್ಲಿ ವಿಜಯನಗರ ಸಾಮ್ರಾಜ್ಯದ 16ನೇ ಶತಮಾನದ ಅಪರೂಪದ ಶಾಸನ ಪತ್ತೆಯಾಗಿದೆ. ಗ್ರಾಮದ ಪಶ್ಚಿಮ ಭಾಗದಲ್ಲಿರುವ ನಾರಿಹಳ್ಳ ದಂಡೆಯ ಬಳಿ ಈ ಅಪ್ರಕಟಿತ ಶಾಸನ ಕಂಡುಬಂದಿದೆ. ಇತಿಹಾಸಾಸಕ್ತರಲ್ಲಿ ಕುತೂಹಲ ಮೂಡಿಸಿದೆ.

ಕೊಪ್ಪಳ ತಾಲೂಕಿನ ಹಿಟ್ನಾಳ್ ಸರ್ಕಾರಿ ಪ್ರಥಮ ದರ್ಜೆ ಕಾಲೇಜಿನ ಇತಿಹಾಸ ಉಪನ್ಯಾಸಕ ಕೆ.ಅಂಜಿನಯ್ಯ ಶಾಸನವನ್ನು ಪತ್ತೆ ಹಚ್ಚಿ, ಪ್ರಾಥಮಿಕವಾಗಿ ಓದಿ ಅರ್ಥೈಸಿದ್ದಾರೆ. ಕನ್ನಡ ಲಿಪಿಯಲ್ಲಿರುವ ಈ ಶಾಸನವು ಶ್ರೀಕೃಷ್ಣದೇವರಾಯನ ಕಾಲಕ್ಕೆ ಸೇರಿದುದಾಗಿ ಅಭಿಪ್ರಾಯಪಟ್ಟಿದ್ದಾರೆ.

ಶಾಸನದಲ್ಲಿ ಹಂಪಾದೇವನಹಳ್ಳಿಯನ್ನು ಕೃಷ್ಣರಾಯಪುರವೆಂದು ಮರುನಾಮಕರಣ ಮಾಡಿ ದಾನ ನೀಡಿರುವ ಉಲ್ಲೇಖವಿದೆ. ಶಾಸನದ ಮೇಲ್ಭಾಗದಲ್ಲಿ ಸೂರ್ಯ-ಚಂದ್ರ ಚಿಹ್ನೆಗಳು, ಕೆಳಭಾಗದಲ್ಲಿ ವಿಷ್ಣುವಿನ ವಾಮನ ಅವತಾರದ ಚಿತ್ರ ಕೆತ್ತಲಾಗಿದೆ. ಸುಮಾರು 5 ಅಡಿ ಎತ್ತರದ ಈ ಗ್ರಾನೈಟ್ ಶಾಸನವು ವಿಜಯನಗರ ಕಾಲದ ವಿಶೇಷತೆ ಹೊತ್ತಿರುವ ಮಹತ್ವದ ಪುರಾವೆಯಾಗಿ ಪರಿಗಣಿಸಲಾಗಿದೆ. ಗ್ರಾಮದ ಯುವಕರು ಶಾಸನ ಪತ್ತೆಗೆ ಸಹಕರಿಸಿದ್ದಾರೆ. ಗ್ರಾಮದ ಯುವಕರಾದ ಕರಿಬಸವ, ಉಮೇಶ್, ಪ್ರವೀಣ್ ಇದ್ದರು.



ಬಿಜೆಪಿ ಗೆಲುವಿಗೆ ವಿಜಯೋತ್ಸವ



• **ಕನ್ನಡಪ್ರಭ ವಾರ್ತೆ** ಕಂಪ್ಲಿ

ಪಶ್ಚಿಮ ಬಂಗಾಳ ರಾಜ್ಯ ವಿಧಾನಸಭಾ ಚುನಾವಣೆಯಲ್ಲಿ ಬಿಜೆಪಿ ಅಭೂತಪೂರ್ವ ಗೆಲುವು ಸಾಧಿಸಿದ ಹಿನ್ನಲೆಯಲ್ಲಿ ಪಟ್ಟಣದಲ್ಲಿ ಬಿಜೆಪಿ ಕಾರ್ಯಕರ್ತರು ಭರ್ಜರಿ ವಿಜಯೋತ್ಸವ ಆಚರಿಸಿದರು.ಪಟ್ಟಣದ ಡಾ.ಬಿ.ಆರ್. ಅಂಬೇಡ್ಕರ್‌ವೃತ್ತದಲ್ಲಿ ಕಾರ್ಯಕರ್ತರು ಸೇರಿ ಪಟಾಕಿ ಸಿಡಿಸಿ, ಪರಸ್ಪರ ಸಿಹಿ ಹಂಚಿಕೊಂಡು ಸಂತೋಷ ವ್ಯಕ್ತಪಡಿಸಿದರು.

ಬಿಎಲ್‌ಒ ಗೊರ್ತಿ ಶ್ರೀನಿವಾಸ ಮಾತನಾಡಿ, ಪಶ್ಚಿಮ ಬಂಗಾಳದಲ್ಲಿ ಬಿಜೆಪಿ ಸಾಧಿಸಿರುವ ಗೆಲುವು ದೇಶದ ರಾಜಕೀಯ ಇತಿಹಾಸದಲ್ಲೇ ಪ್ರಮುಖ ಘಟ್ಟವಾಗಿದೆ. ಪ್ರಧಾನಿ ನರೇಂದ್ರ ಮೋದಿ ಮತ್ತು ಗೃಹ ಸಚಿವ ಅಮಿತ್ ಶಾ ನೇತೃತ್ವದಲ್ಲಿ ಬಿಜೆಪಿ ಬಲಿಷ್ಠವಾಗಿ ಬೆಳೆದಿದೆ ಎಂದರು. ಮಂಡಲ ಅಧ್ಯಕ್ಷ ಸಿ.ಡಿ. ಮಹಾದೇವ ಮಾತನಾಡಿದರು. ಪ್ರಶಾಂತ್, ಮನೋಜ್‌ಗೌಡ, ಟಿ.ವಿ. ಸುದರ್ಶನ ರೆಡ್ಡಿ, ಜಿ. ಶ್ರೀನಿವಾಸ್, ಕೆ. ಬಸವಪ್ರಭು, ಸಿ.ಎ. ಚನ್ನಪ್ಪ, ಎನ್.ರಾಮಾಂಜನೇಯಲು, ವಿ.ಎಲ್. ಬಾಬು, ಕಾರ್ತಿಕ್, ಚೇತನ್‌ಕುಮಾರ್, ಯಣ್ಣಿ ವೆಂಕಟೇಶ್, ಇಟಗಿ ವಿರುಪಾಕ್ಷಿ ಇದ್ದರು.



ರಂಗಭೂಮಿಯ ಅನನ್ಯ ಸಾಧಕ ಗೆಣಿಕೆಹಾಳು ಮೇಲ್ಸೀಮೆ ತಿಮ್ಮನಗೌಡ

ರಂಗಸೇವೆ ಗುರುತಿಸಿ ಕನ್ನಡಪ್ರಭ- ಏಷಿಯಾನೆಟ್ ಸುವರ್ಣ ವಾಹಿನಿ ಕೊಡಮಾಡುವ 2026ನೇ ಸಾಲಿನ ಸುವರ್ಣ ಕನ್ನಡಿಗ ಪ್ರಶಸ್ತಿಗೆ ಭಾಜನ | ಅಶ್ವತ್ಥಾಮನ ಪಾತ್ರಕ್ಕೆ ಜೀವ ತುಂಬುವ ರಂಗಸಾಧಕ | ಯಳವಾಳ ಸಿದ್ದಯ್ಯಸ್ವಾಮಿಗಳಿಂದ ರಂಗಭೂಮಿ ಪಟ್ಟುಗಳ ಕಲಿಕೆ | ಬಯಲಾಟ, ಸಾಮಾಜಿಕ, ಪೌರಾಣಿಕ ನಾಟಕಗಳಲ್ಲೂ ಅಮೋಘ ಅಭಿನಯ

• **ಮಂಜುನಾಥ ಕೆ.ಎಂ.**

ರಂಗಭೂಮಿ ಕೇವಲ ಮನರಂಜನೆಯ ಸಾಧನವಲ್ಲ. ಸಮಾಜದ ಚಿಂತನೆಗಳನ್ನು ವ್ಯಕ್ತಪಡಿಸುವ ಶಕ್ತಿಯುತ ಮಾಧ್ಯಮ. ರಂಗಭೂಮಿ ಜೀವಂತವಾಗಿಡಲು ಕಲಾವಿದರ ಪಾತ್ರವೂ ಅಷ್ಟೇ ಮಹತ್ವದ್ದು.


ಬಾಲ್ಯದಲ್ಲಿಯೇ ರಂಗಭೂಮಿ ಸೆಳೆತಕ್ಕೆ ಒಳಪಟ್ಟು ಬದುಕಿನ ಬಹುಭಾಗವನ್ನು ರಂಗಸೇವೆಗೆ ಮೀಸಲಿಟ್ಟ ಕುರುಗೋಡು ತಾಲೂಕಿನ ಗೆಣಿಕೆಹಾಳು ಗ್ರಾಮದ ಮೇಲ್ಸೀಮೆ ತಿಮ್ಮನಗೌಡ ಅವರು ಇಳಿ ವಯಸ್ಸಿನಲ್ಲಿಯೂ ರಂಗಭೂಮಿಯ ವಿವಿಧ ಪಾತ್ರಗಳನ್ನು ನಿಭಾಯಿಸಿ ರಂಗತ್ರಾಣವನ್ನು ಸಾಬೀತು ಪಡಿಸಿದವರು.

ಸಾಮಾನ್ಯವಾಗಿ ರಂಗಭೂಮಿ ಕಲಾವಿದ ಎಂದರೆ ನಿರ್ದಿಷ್ಟ ಪ್ರಕಾರಕ್ಕೆ ಸೀಮಿತಗೊಳ್ಳುವುದು ಸ್ವಾಭಾವಿಕ. ಆದರೆ, ಮೇಲ್ಸೀಮೆ ತಿಮ್ಮನಗೌಡ ಅವರು ಸಾಮಾಜಿಕ ಹಾಗೂ ಪೌರಾಣಿಕ ಪಾತ್ರಗಳಲ್ಲದೆ ಉತ್ತರ ಕರ್ನಾಟಕದ ಗಂಡುಮೆಟ್ಟಿನ ಕಲೆ ಎಂದೇ ಖ್ಯಾತವಾಗಿರುವ ಬಯಲಾಟಗಳಲ್ಲೂ ಅಮೋಘವಾಗಿ ಅಭಿನಯಿಸಿ ಸೈ ಎನಿಸಿಕೊಂಡಿದ್ದಾರೆ.

ನಾಲ್ಕೂವರೆ ದಶಕದ ರಂಗಭೂಮಿ ನಂಟು: ಕಳೆದ 47 ವರ್ಷಗಳಿಂದ ರಂಗಭೂಮಿಯ ನಂಟು ಹೊಂದಿರುವ ಇವರು ರಂಗಾಸಕ್ತಿಯನ್ನು ಕಳೆದುಕೊಳ್ಳದೇ ರಂಗ ಜಂಗಮನಂತೆ ಪೌರಾಣಿಕ, ಸಾಮಾಜಿಕ ಹಾಗೂ ಬಯಲಾಟಗಳಲ್ಲಿ ಸಾವಿರಾರು ಪ್ರದರ್ಶನಗಳನ್ನು ನೀಡಿ ಪ್ರೇಕ್ಷಕರ ಪ್ರೀತಿ, ಗೌರವಗಳನ್ನು ಜತನದಿಂದ ಕಾಪಿಟ್ಟುಕೊಂಡಿದ್ದಾರೆ. ರಕ್ತರಾತ್ರಿ ಪೌರಾಣಿಕ ನಾಟಕದಲ್ಲಿ ಅಶ್ವತ್ಥಾಮ ಹಾಗೂ ಬಯಲಾಟದ ಅಭಿಮನ್ಯು ಕಾಳಗದಲ್ಲಿ ಕೃಷ್ಣನ ಪಾತ್ರಕ್ಕೆ ಜೀವ ತುಂಬಿ ಜನಮಾನಸದಲ್ಲಿ ಉಳಿದುಕೊಂಡಿದ್ದಾರೆ.

ವೃತ್ತಿಯಲ್ಲಿ ಕೃಷಿಕರಾಗಿರುವ ಗೆಣಿಕೆಹಾಳು ಗ್ರಾಮದ ಮೇಲ್ಸೀಮೆ ತಿಮ್ಮನಗೌಡ ಅವರು ಹವ್ಯಾಸಿ ಕಲಾವಿದರಾಗಿ ರಂಗಸೇವೆಗೆ ಬಂದವರು. ಗೌಡರ ಕುಟುಂಬ ಸದಸ್ಯರು ಬಯಲಾಟದಲ್ಲಿ ಅಭಿನಯಿಸುತ್ತಿದ್ದರು. ಮನೆಯಲ್ಲಿನ ರಂಗಭೂಮಿ ವಾತಾವರಣ ಇವರನ್ನು ಬಣ್ಣದ ಲೋಕದತ್ತ ಆಕರ್ಷಿಸುವಂತೆ ಮಾಡಿತು. ನಾಡಿನ ಖ್ಯಾತ ರಂಗಕರ್ಮಿ ಯಳವಾಳ ಸಿದ್ಧಯ್ಯಸ್ವಾಮಿ ಅವರಿಂದ ರಂಗಪಟ್ಟುಗಳನ್ನು ಕಲಿತು, ರಂಗಸೇವೆಯಲ್ಲಿ ತೊಡಗಿಸಿಕೊಂಡರು. ಪಾತ್ರಕ್ಕೆ ತಕ್ಕಂತೆ ಭಾವಭಂಗಿ, ಸಂಭಾಷಣೆಯ ವಿಶಿಷ್ಟ ಶೈಲಿ ಸೇರಿದಂತೆ ರಂಗಸ್ಥಳದ ಬಹು ಆಯಾಮಗಳನ್ನು ಯಳವಾಳ ಸಿದ್ಧಯ್ಯ ಸ್ವಾಮಿಗಳಿಂದ ಕರಗತ ಮಾಡಿಕೊಂಡ ಮೇಲ್ಸೀಮೆ ತಿಮ್ಮನಗೌಡರು, ಕೃಷಿ ಕಾಯಕದ ನಡುವೆ ರಂಗಭೂಮಿ ಸೇವೆಯನ್ನು ಮುಂದುವರಿಸಿಕೊಂಡು ಬಂದಿದ್ದಾರೆ.

ಪ್ರಶಸ್ತಿ, ಗೌರವ ಸನ್ಮಾನಗಳು: ಗೌಡರ ರಂಗಭೂಮಿ ಸೇವೆಗೆ ಡಾ.ಜೋಳದರಾಶಿ ದೊಡ್ಡನಗೌಡ ರಂಗಪ್ರಶಸ್ತಿ, ರಂಗಸಿರಿ ಪ್ರಶಸ್ತಿ, ಬಳ್ಳಾರಿ ರಾಘವ ಪ್ರಶಸ್ತಿ, 2022- 23ನೇ ಸಾಲಿನ



ನನಗೀಗ 69 ವಯಸ್ಸು. ಈಗಲೂ ನನಗೆ ರಂಗಚೈತನ್ಯ ಕುಂದಿಲ್ಲ. ಪ್ರೇಕ್ಷಕರ ಒತ್ತಾಸೆಯಂತೆ ನಾಡಿನ ಅನೇಕ ಭಾಗಗಳಿಗೆ ತೆರಳಿ ಅಭಿನಯಿಸುತ್ತೇನೆ. ಈವರೆಗೆ 1782 ಬಾರಿ ಅಶ್ವತ್ಥಾಮನ ಪಾತ್ರ, 700 ಬಾರಿ ಭೀಮನ ಪಾತ್ರದಲ್ಲಿ ಹಾಗೂ 600ಕ್ಕೂ ಅಧಿಕ ಸಾಮಾಜಿಕ ನಾಟಕಗಳಲ್ಲಿ ಅಭಿನಯಿಸಿದ್ದೇನೆ. ಶರೀರ, ಶಾರೀರ ಕಾಪಾಡಿಕೊಂಡಲ್ಲಿ ಮಾತ್ರ ರಂಗಭೂಮಿಯಲ್ಲಿ ಉಳಿದುಕೊಳ್ಳಲು ಸಾಧ್ಯ. ಕುಟುಂಬದ ಬೆಂಬಲ, ಪ್ರೋತ್ಸಾಹದಿಂದ ರಂಗಸೇವೆಯಲ್ಲಿ ತೊಡಗಿಸಿಕೊಳ್ಳಲು ಸಾಧ್ಯವಾಯಿತು. ಪತ್ನಿ ಗಿರಿಜಮ್ಮ, ನನ್ನ ಸಹೋದರರು, ಕುಟುಂಬ ಸದಸ್ಯರ ಸಹಕಾರ ಇಲ್ಲದಿದ್ದರೆ ರಂಗಭೂಮಿಯಲ್ಲಿ ಬೆಳೆಯಲು ಸಾಧ್ಯವಾಗುತ್ತಿರಲಿಲ್ಲ.

• **ಗೆಣಿಕೆಹಾಳು ಮೇಲ್ಸೀಮೆ ತಿಮ್ಮನಗೌಡ** ಹಿರಿಯ ರಂಗಭೂಮಿ ಕಲಾವಿದ. ಬಳ್ಳಾರಿ ಜಿಲ್ಲೆ


ರಾಜ್ಯೋತ್ಸವ ಪ್ರಶಸ್ತಿ

ಸುಮಾರು ನಾಲ್ಕೂವರೆ ದಶಕಗಳ ಕಾಲ ರಂಗಭೂಮಿ ಕ್ಷೇತ್ರದಲ್ಲಿ ಅಪಾರವಾದ ಸೇವೆಗೈದಿರುವ ಗೆಣಿಕೆಹಾಳು ಮೇಲ್ಸೀಮೆ ತಿಮ್ಮನಗೌಡ ಅವರಿಗೆ ನಾಡಿನ ಅನೇಕ ಸಂಘ-ಸಂಸ್ಥೆಗಳು ಪ್ರಶಸ್ತಿ ನೀಡಿ ಗೌರವಿಸಿವೆ. ನಾಡಿನ ಪ್ರತಿಷ್ಠಿತ ಮಾಧ್ಯಮ ಸಂಸ್ಥೆಗಳಾದ ಕನ್ನಡಪ್ರಭ-ಸುವರ್ಣನ್ಯೂಸ್ ಸುವರ್ಣ ಕನ್ನಡಿಗ-2026 ಪ್ರಶಸ್ತಿ ನೀಡಿ ಗೌರವಿಸಿವೆ.

ಆದರೆ, ರಾಜ್ಯ ಸರ್ಕಾರ ಈವರೆಗೆ ರಾಜ್ಯೋತ್ಸವ ಪ್ರಶಸ್ತಿಗೆ ಆಯ್ಕೆ ಮಾಡಿಲ್ಲ. ಬಯಲಾಟ ಅಥವಾ ನಾಟಕ ಅಕಾಡೆಮಿಯ ಸದಸ್ಯರನ್ನಾಗಿಯೂ ಸಹ ನೇಮಿಸಿಲ್ಲ ಎಂದು ಗೌಡರ ಅಭಿಮಾನಿಗಳು ಅತ್ಯಂತ ಬೇಸರ ವ್ಯಕ್ತಪಡಿಸುತ್ತಾರೆ.

ಬಾಲ್ಯದಲ್ಲಿಯೇ ರಂಗಭೂಮಿ ಸೆಳೆತ

ಮೇಲ್ಸೀಮೆ ತಿಮ್ಮನಗೌಡರು 12 ವರ್ಷದ ಬಾಲಕನಿದ್ದಾಗ ಇವರ ತಾತ ಬಯಲಾಟ ತಾಲೀಮು ನಡೆಯುವ ಜಾಗಕ್ಕೆ ಕರೆದುಕೊಂಡು ಹೋಗುತ್ತಿದ್ದರು. ನಿತ್ಯ ಬಯಲಾಟದ ತಾಲೀಮು ನೋಡುತ್ತಾ ಬೆಳೆದ ತಿಮ್ಮನಗೌಡರಿಗೆ ಸಹಜವಾಗಿಯೇ ರಂಗಭೂಮಿ ಆಸಕ್ತಿ ಬಂದಿದೆ. 12ನೇ ವಯಸ್ಸಿನಲ್ಲಿ ಇರುವಾಗ ಬಾಲ ಮಾರ್ಕಂಡೇಯ ಪಾತ್ರ ಮಾಡಿದರಲ್ಲದೆ, ಬಳಿಕ ಕುಟುಂಬ ಸದಸ್ಯರ ಒತ್ತಾಸೆಯಂತೆ ಬಯಲಾಟದ ಸಣ್ಣಸಣ್ಣ ಪಾತ್ರಗಳನ್ನು ನಿರ್ವಹಿಸುತ್ತಿದ್ದರು. ಗೌಡರ ಮನೆಯಲ್ಲಿಯೇ ಅನೇಕ ವರ್ಷಗಳ ಕಾಲ ಉಳಿದುಕೊಂಡಿದ್ದ ಹಿರಿಯ ರಂಗಭೂಮಿ ನಿರ್ದೇಶಕ ಯಳವಾಳ ಸಿದ್ದಯ್ಯಸ್ವಾಮಿ ಅವರು ಗೌಡರಿಗೆ ರಂಗಭೂಮಿ ಕಲೆಯನ್ನು ಪೂರ್ಣವಾಗಿ ಧಾರೆ ಎರೆದರು.



ಮೇಲ್ಸೀಮೆ ತಿಮ್ಮನಗೌಡರ ಬಯಲಾಟದಲ್ಲಿ ಕೃಷ್ಣನ ಪಾತ್ರ ನನಗಿಷ್ಟ. ಅವರ ಜೊತೆ ನಾನು ಬಯಲಾಟದ ಅರ್ಜುನ ಪಾತ್ರ ನಿಭಾಯಿಸಿದ್ದೇನೆ. ಪೌರಾಣಿಕ ಹಾಗೂ ಸಾಮಾಜಿಕ ನಾಟಕಗಳಲ್ಲಿ ಅವರು ಚೆನ್ನಾಗಿ ಅಭಿನಯಿಸಿ ಹೆಸರು ಮಾಡಿದ್ದಾರೆ.

• **ಪಂಪನಗೌಡ** ಕೃಷಿಕರು, ಗೆಣಿಕೆಹಾಳು



ಬಯಲಾಟ ಕಲಾವಿದರು ನಾಟಕ ಆಡುವುದು ಬಹಳ ಕಷ್ಟ. ಸಾಮಾನ್ಯ ಕಲಾವಿದರಿಗೆ ಇದು ಸಾಧ್ಯವೇ ಇಲ್ಲ. ಆದರೆ, ಎರಡು ಕ್ಷೇತ್ರದಲ್ಲೂ ಮೇಲ್ಸೀಮೆ ತಿಮ್ಮನಗೌಡರು ಅತ್ಯುತ್ತಮವಾಗಿ ಅಭಿನಯಿಸುತ್ತಾರೆ. ಈ ರೀತಿಯ ಕಲಾವಿದರು ತೀರಾ ಅಪರೂಪ.

• **ಭಟ್ರಹಳ್ಳಿ ನಾಗಪ್ಪ** ಗೆಣಿಕೆಹಾಳು ಗ್ರಾಮ



ಬಾಲ್ಯದಿಂದಲೂ ಅವರ ಬಯಲಾಟ ಹಾಗೂ ನಾಟಕಗಳನ್ನು ನೋಡುತ್ತಾ ಬಂದಿದ್ದೇನೆ. ಪೌರಾಣಿಕ ಪಾತ್ರಗಳಲ್ಲಿ ಅವರನ್ನು ನೋಡುವುದು ನನಗಿಷ್ಟ. ಅಶ್ವತ್ಥಾಮ ಪಾತ್ರದ ಮೂಲಕ ಹೆಚ್ಚು ಹೆಸರು ಮಾಡಿದ್ದಾರೆ. ಯಾವುದೇ ಪಾತ್ರವಿರಲಿ, ಅದಕ್ಕೆ ಜೀವ ತುಂಬಿ ನಟಿಸುತ್ತಾರೆ.

• **ಮುಷ್ಟಗಟ್ಟೆ ಬಸವನಗೌಡ** ಗೆಣಿಕೆಹಾಳು ಗ್ರಾಮ



ಸುಮಾರು 25 ವರ್ಷಗಳಿಂದ ಗೌಡರ ಜೊತೆ ಒಡನಾಟದಲ್ಲಿದ್ದೇನೆ. ಗ್ರಾಮೀಣ ಕಲೆಯನ್ನು ಉಳಿಸುವ ಕೆಲಸವನ್ನು ಅತ್ಯಂತ ಜತನದಿಂದ ಮಾಡುತ್ತಿದ್ದಾರೆ. ಗೆಣಿಕೆಹಾಳು ತಿಮ್ಮನಗೌಡ ಎಂಬ ಹೆಸರು ರಾಜ್ಯಮಟ್ಟದಲ್ಲಿ ಹೆಸರಾಗಿದೆ. ಅದೇ ನಮ್ಮ ಖುಷಿ.

• **ಹುಸೇನ್ ಬಾಷಾ** ಸರ್ಕಾರಿ ಪ್ರೌಢಶಾಲೆ ಮುಖ್ಯಗುರು, ಗೆಣಿಕೆಹಾಳು



ಮೇಲ್ಸೀಮೆ ತಿಮ್ಮನಗೌಡರು ಬಳ್ಳಾರಿ ಜಿಲ್ಲೆಗೆ ಕೀರ್ತಿ ತಂದ ಹಿರಿಯ ರಂಗಭೂಮಿ ಕಲಾವಿದರು. ಕಲೆಯನ್ನು ವೃತ್ತಿಯನ್ನಾಗಿಸಿಕೊಳ್ಳದೇ ಕೃಷಿಯ ಜೊತೆಗೆ ಹವ್ಯಾಸಿ ಕಲಾವಿದರಾಗಿ ಬೆಳೆದು ಬಂದಿರುವ ಅವರ ಸಾಧನೆ ಅನನ್ಯವಾದದ್ದು. ಇಳಿ ವಯಸ್ಸಿನಲ್ಲೂ ರಂಗಾಸಕ್ತಿ ಕುಗ್ಗಿಸಿಕೊಳ್ಳದೇ ರಂಗಚೈತನ್ಯ ಜೀವಂತವಾಗಿರಿಸಿಕೊಂಡವರು.

• **ಚಂದ್ರಶೇಖರಗೌಡ ಮಸೀದಿಪುರ** ಯುವ ಉದ್ಯಮಿ, ಬಳ್ಳಾರಿ.



ಮೇಲ್ಸೀಮೆ ತಿಮ್ಮನಗೌಡರ ರಂಗಭೂಮಿ ಸೇವೆಯನ್ನು ಗುರುತಿಸಿ ಕನ್ನಡಪ್ರಭ-ಸುವರ್ಣ ನ್ಯೂಸ್ ವತಿಯಿಂದ ಬೆಂಗಳೂರಿನ ಕಾನ್ರಾಡ್ ಹೋಟೆಲ್ ಸಭಾಂಗಣದಲ್ಲಿ 2026ರ ಮಾರ್ಚ್ 28 ರಂದು ಜರುಗಿದ ಕಾರ್ಯಕ್ರಮದಲ್ಲಿ ಸುವರ್ಣಕನ್ನಡಿಗ-2026 ಪ್ರಶಸ್ತಿ ನೀಡಿ ಗೌರವಿಸಲಾಯಿತು.

ಕಲಾವಿದರನ್ನಾಗಿ ರೂಪಿಸಿದ 'ಕಲಾಬ್ರಹ್ಮ'



ಗುರುಗಳಾದ ಶ್ರೀ ಎಲಿವಾಳ ಸಿದ್ದಯ್ಯ ಸ್ವಾಮಿಗಳೊಂದಿಗೆ ಶ್ರೀ ತಿಮ್ಮನಗೌಡ ಮೇಲ್ಸೀಮೆ ಗೆಣಿಕೆಹಾಳ್











ಕನ್ನಡ ರಂಗಭೂಮಿಗೆ ಬಹುದೊಡ್ಡ ಕೊಡುಗೆ ನೀಡಿರುವ ಮೇಲ್ಸೀಮೆ ತಿಮ್ಮನಗೌಡರಿಗೆ ಇಂದಿಗೂ ರಂಗಾಸಕ್ತಿ ಕುಗ್ಗಿಲ್ಲ. ಇಳಿ ವಯಸ್ಸಿನಲ್ಲೂ ಯಾವುದೇ ಪಾತ್ರ ನೀಡಿದರೂ ಅಮೋಘವಾಗಿ ಅಭಿನಯಿಸುತ್ತಾರೆ. ಅವರು ರಂಗಭೂಮಿ ಪ್ರವೇಶಿಸುವುದನ್ನು ನೋಡುವುದೇ ಒಂದು ಆನಂದ.

• **ಸದಾಶಿವಸ್ವಾಮಿ** ನಿವೃತ್ತ ನೌಕರರು, ಕುರುಗೋಡು



ರಂಗಭೂಮಿ ಕ್ಷೇತ್ರದಲ್ಲಿ ಗುರುತಿಸಿಕೊಂಡಿರುವ ಮೇಲ್ಸೀಮೆ ತಿಮ್ಮನಗೌಡರು ಪ್ರತಿಯೊಬ್ಬ ಕಲಾವಿದರಿಗೂ ಸ್ಫೂರ್ತಿ ಮತ್ತು ಪ್ರೇರಣೆಯಾಗಿದ್ದಾರೆ. ಪೌರಾಣಿಕ ಹಾಗೂ ಸಾಮಾಜಿಕ ನಾಟಕದ ಯಾವುದೇ ಪಾತ್ರ ನೀಡಿದರೂ ಲೀಲಾಜಾಲವಾಗಿ ಅಭಿನಯಿಸುವ ಅಪೂರ್ವ ಪ್ರತಿಭೆಯಾಗಿದ್ದಾರೆ.

• **ಶರಣಗೌಡ** ಗೆಣಿಕೆಹಾಳು ಗ್ರಾಮ



ಮೇಲ್ಸೀಮೆ ತಿಮ್ಮನಗೌಡರು ನಮ್ಮೂರಿನವರು ಎಂದು ಹೇಳಿಕೊಳ್ಳುವುದೇ ನಮಗೆ ಹೆಮ್ಮೆಯ ಸಂಗತಿ. ಬಯಲಾಟ ಹಾಗೂ ನಾಟಕ ಕ್ಷೇತ್ರಕ್ಕೆ ದೊಡ್ಡ ಕೊಡುಗೆ ನೀಡಿದ್ದಾರೆ. ಬಾಲ್ಯದಿಂದಲೇ ಅವರಿಗೆ ರಂಗಾಸಕ್ತಿಯಿತ್ತು. ಇದೀಗ ಅದು ಬೆಳೆದು ಹೆಮ್ಮರವಾಗಿದೆ.

• **ದೊಡ್ಡನಗೌಡ** ಗೆಣಿಕೆಹಾಳು ಗ್ರಾಮ



ಯಳವಾಳ ಸಿದ್ಧಯ್ಯ ಸ್ವಾಮಿಯಂತಹ ಮಹಾನ್ ರಂಗಭೂಮಿ ಕಲಾವಿದರಿಂದ ತರಬೇತಿ ಪಡೆದಿರುವ ಮೇಲ್ಸೀಮೆ ತಿಮ್ಮನಗೌಡ ಕರ್ನಾಟಕದ ರಂಗಭೂಮಿಯ ರಾಯಭಾರಿಯಂತಿದ್ದಾರೆ. ಪೌರಾಣಿಕ ನಾಟಕಗಳ ಮೂಲಕ ನಾಡಿನ ಮನೆ ಮಾತಾಗಿದ್ದಾರೆ. ಗೆಣಿಕೆಹಾಳು ಗ್ರಾಮಕ್ಕೆ ದೊಡ್ಡ ಹೆಸರು ತಂದುಕೊಟ್ಟಿದ್ದಾರೆ.

• **ಜಿ.ಎಂ.ಶರಣಬಸವ** ಗೆಣಿಕೆಹಾಳು ಗ್ರಾಮ.



ಬಾಲ ಕಲಾವಿದನಾಗಿ ರಂಗಪ್ರವೇಶ ಮಾಡಿದ ನನ್ನಣ್ಣ ತಿಮ್ಮನಗೌಡರು ಹವ್ಯಾಸಿ ರಂಗಭೂಮಿ ಕಲಾವಿದರಾಗಿದ್ದರೂ ವೃತ್ತಿ ರಂಗಭೂಮಿ ಕಲಾವಿದನಂತೆ ಅತ್ಯುತ್ತಮವಾಗಿ ಅಭಿನಯಿಸಿ ರಂಗಾಸಕ್ತರ ಮನಸ್ಸು ಗೆದ್ದಿದ್ದಾರೆ. ನಾವೆಲ್ಲ ಸಹೋದರರು ಅವರಿಗೆ ನಿರಂತರವಾಗಿ ಪ್ರೋತ್ಸಾಹ ಕೊಡುತ್ತಿದ್ದೇವೆ.

• **ಧರ್ಮವೀರ** ಗೆಣಿಕೆಹಾಳು, ತಿಮ್ಮನಗೌಡರ ಸಹೋದರ

ವಿಜಯೇಂದ್ರ, ಆರ್.ಅಶೋಕ ವಜಾಗೆ ಆಗ್ರಹ



ಕೊಟ್ಟೂರು: ದಾವಣಗೆರೆ, ಬಾಗಲಕೋಟೆ ಕ್ಷೇತ್ರಗಳಿಗೆ ನಡೆದ ಉಪ ಚುನಾವಣೆಯಲ್ಲಿ ಬಿಜೆಪಿ ಅಭ್ಯರ್ಥಿಗಳ ಸೋಲಿಗೆ ರಾಜ್ಯದ ಅಸಮರ್ಥ ನಾಯಕತ್ವ ಮತ್ತು ಎಲ್ಲರನ್ನು ಒಗ್ಗೂಡಿಸಿಕೊಂಡು ಹೋಗದಿರುವ ಅಸಂಘಟನೆ ಕಾರಣ ಎಂದು ಸ್ಪಷ್ಟವಾಗಿದೆ. ಪಕ್ಷದ ವರಿಷ್ಠರು ಈ ಕಾರಣದಿಂದ ಬಿಜೆಪಿ ರಾಜ್ಯ ಘಟಕವನ್ನು ವಿಸ್ತರಿಸಿ ಹೊಸ ಅಧ್ಯಕ್ಷರನ್ನು ನೇಮಕ ಮಾಡಲು ಕ್ರಮ ಕೈಗೊಳ್ಳಬೇಕೆಂದು ಬಿಜೆಪಿ ಹಿರಿಯ ಮುಖಂಡ ಎಸ್.ತಿಂದಪ್ಪ ಹೇಳಿದರು.ಇಲ್ಲಿನ ಪ್ರವಾಸಿ ಮಂದಿರದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಬಿಜೆಪಿ ರಾಜ್ಯಾಧ್ಯಕ್ಷ ಬಿ.ವೈ. ವಿಜಯೇಂದ್ರ, ವಿರೋಧ ಪಕ್ಷದ ನಾಯಕ ಆರ್.ಅಶೋಕ್ ಸ್ವಹಿತಾಸಕ್ತಿಗೆ ಒತ್ತು ನೀಡಿ ಉಪಚುನಾವಣೆ ಪ್ರಚಾರ ಕಾರ್ಯದಲ್ಲಿ ಸರಿಯಾಗಿ ಕೆಲಸ ಮಾಡಿಲ್ಲ. ಉಪಚುನಾವಣೆಗೆ ಸೂಕ್ತ ಅಭ್ಯರ್ಥಿಗಳನ್ನು ಆಯ್ಕೆ ಮಾಡಲು ವರಿಷ್ಠರಿಗೆ ವಾಸ್ತವ ಸಂಗತಿಯ ಮಾಹಿತಿ ನೀಡದ ಈ ಇಬ್ಬರು ಇರುವವರೆಗೂ ಪಕ್ಷಕ್ಕೆ ಖಂಡಿತ ಭವಿಷ್ಯವಿಲ್ಲ ಎಂದರು. ದಾವಣಗೆರೆ ಉಪಚುನಾವಣೆಯಲ್ಲಿ ಪಕ್ಷದ ಅಭ್ಯರ್ಥಿಯನ್ನಾಗಿ ಸಾಮಾನ್ಯ ವರ್ಗದ ವ್ಯಕ್ತಿಯನ್ನು ಆಯ್ಕೆ ಮಾಡದೇ ಅನಗತ್ಯವಾಗಿ ಮೀಸಲು ಪಂಗಡದ ಅಭ್ಯರ್ಥಿಗೆ ಪಕ್ಷದ ಟಿಕೆಟ್ ನೀಡಿ ಅಭ್ಯರ್ಥಿಯನ್ನಾಗಿ ನಿಲ್ಲಿಸಿದ್ದು ಸಹಜವಾಗಿ ಸಾಮಾನ್ಯ ವರ್ಗದ ಮತದಾರರು ಪಕ್ಷದ ಅಭ್ಯರ್ಥಿಗೆ ಮತ ನೀಡಲು ಮುಂದಾಗಿಲ್ಲ. ಗೆಲ್ಲಬೇಕಿದ್ದ ಈ ಸ್ಥಾನ ಆಡಳಿತ ಪಕ್ಷಕ್ಕೆ ಸುಲಭವಾಗಿ ದೊರಕುವಂತಾಯಿತು ಎಂದರು. ರಾಜ್ಯಾಧ್ಯಕ್ಷ ಬಿ.ವೈ. ವಿಜೇಂದ್ರ ಅವರನ್ನು ಬದಲಾಯಿಸಬೇಕು. ಇಲ್ಲವೇ ರಾಜ್ಯ ಘಟಕವನ್ನು ಸಂಪೂರ್ಣ ವಿಸರ್ಜಿಸಿ ಹೊಸ ಸಮಿತಿ ರಚಿಸಬೇಕು. ವಿರೋಧ ಪಕ್ಷದ ನಾಯಕ ಆರ್.ಅಶೋಕ ಅವರನ್ನು ಕೆಳಗಿಳಿಸಬೇಕು. ಸಮರ್ಥ ಶಾಸಕರ ದೊಡ್ಡ ಪಡೆ ಪಕ್ಷದಲ್ಲಿದ್ದು, ಅಂತವರಿಗೆ ವಿರೋಧ ಪಕ್ಷದ ಸ್ಥಾನ ನೀಡಬೇಕು ಎಂದು ಒತ್ತಾಯಿಸಿದರು. ಸುದ್ದಿಗೋಷ್ಠಿಯಲ್ಲಿ ಹರಾಳು ಬಸವರಾಜ, ಗಂಗಮ್ಮನಹಳ್ಳಿ ಸಿದ್ದಪ್ಪ ಇದ್ದರು.

ರಸಗೊಬ್ಬರ ಅಂಗಡಿ ಪರಿಶೀಲನೆ



ತೆಕ್ಕಲಕೋಟೆ: ಸಮೀಪದ ಸಿರಿಗೇರಿ ಗ್ರಾಮದಲ್ಲಿ ರಸಗೊಬ್ಬರ ಮತ್ತು ಬೀಜ ಮಾರಾಟದ ಅಂಗಡಿಗಳ ಸಹಾಯಕ ಕೃಷಿ ನಿರ್ದೇಶಕ ಮಂಜುನಾಥ ರೆಡ್ಡಿ ಭೇಟಿ ನೀಡಿ ಪರಿಶೀಲನೆ ನಡೆಸಿದರು.ತಾಲೂಕಿನ ಗ್ರಾಮದಲ್ಲಿರುವ ರಸಗೊಬ್ಬರ ಮತ್ತು ಬೀಜ ಮಾರಾಟದ ಅಂಗಡಿಗಳಿಗೆ ಭೇಟಿ ನೀಡಿ ಬೀಜ, ರಸಗೊಬ್ಬರ, ದಾಸ್ತಾನು ಪರಿಶೀಲನೆ ನಡೆಸಿ ಮಾತನಾಡಿದ ಅವರು, ಮುಖ್ಯವಾಗಿ ಅಕ್ರಮ ದಾಸ್ತಾನು, ಹೆಚ್ಚಿನ ದರಕ್ಕೆ ಮಾರಾಟ ಮತ್ತು ಗುಣಮಟ್ಟದ ತಪಾಸಣೆ ಈ ಉದ್ದೇಶವಾಗಿದೆ. ನಮ್ಮಲ್ಲಿ ಇನ್ನು ಬಿತ್ತನೆ ಕಾರ್ಯ ಮತ್ತು ಭತ್ತದ ಬೆಳೆ ನಾಟಿ ಕಾರ್ಯ ಆರಂಭವಾಗಿಲ್ಲ, ಕೃಷಿ ಚಟುವಟಿಕೆಗಳು ಆರಂಭವಾಗುವವರೆಗೆ ಯೂರಿಯಾ ರಸಗೊಬ್ಬರ ಮಾರಾಟ ಮಾಡಬಾರದು ಎಂದರು. ರಸಗೊಬ್ಬರವನ್ನು ನಿಗದಿಪಡಿಸಿದ ದರಕ್ಕಿಂತ ಹೆಚ್ಚಿನ ಬೆಲೆಗೆ ಮಾರಾಟ ಮಾಡುವ ಅಂಗಡಿಗಳ ಮೇಲೆ ಕ್ರಮ ಕೈಕೊಳ್ಳಲಾಗುವುದು ಎಂದು ಹೇಳಿದರು.

ಶ್ರೀ ಸೋಮೇಶ್ವರ ಸಹಕಾರಿ ಸಕ್ಕರೆ ಕಾರಖಾನೆ ನಿಯಮಿತ, ಬೈಲಹೊಂಗಲ.

ಕಾರ್ಖಾನೆಯ ನಿವೇಶನ ಸಿದ್ಧಸಮುದ್ರ ಪೋಸ್ಟ: ಬೆಳವಡಿ 591 104 ತಾಲೂಕ: ಬೈಲಹೊಂಗಲ ಜಿಲ್ಲಾ: ಬೆಳಗಾವಿ E-mail: someshwarsugar@rediffmail.com

ಸಾರ್ವಜನಿಕ ಪ್ರಕಟಣೆ

ಕರ್ನಾಟಕ ಸರ್ಕಾರದ ರಾಜ್ಯ ಮಟ್ಟದ ಪರಿಸರ ಪರಿಣಾಮ ಮೌಲ್ಯಮಾಪನ ಪ್ರಾಧಿಕಾರವು (State Environment Impact Assessment Authority - SEIAA) ಪತ್ರ ಸಂಖ್ಯೆ EC No. EC 23 B2501 KA 5869006, ಕಡತ ಸಂಖ್ಯೆ. SEIAA 36 IND 2021 ದಿನಾಂಕ: 28ನೇ ಏಪ್ರೀಲ್ 2026 ರಂತೆ **ಶ್ರೀ ಸೋಮೇಶ್ವರ ಸಹಕಾರಿ ಸಕ್ಕರೆ ಕಾರ್ಖಾನೆ ನಿ., ಬೈಲಹೊಂಗಲ** ಕಾರ್ಖಾನೆ ನಿವೇಶನ ಸಿದ್ಧಸಮುದ್ರ ಪೋಸ್ಟ್: ಬೆಳವಡಿ ತಾಲೂಕು ಬೈಲಹೊಂಗಲ ಜಿಲ್ಲೆ ಬೆಳಗಾವಿ ಕರ್ನಾಟಕ ರಾಜ್ಯ ಪಿನ್ ಕೋಡ್ : 591 104 ವತಿಯಿಂದ ಮೋಲ್ಯಾಸಿಸ್ (ಬಿ & ಸಿ ಹೆವಿ)/ ಕೇನ್ ಸಿರಪ್ ಬೇಸ್ಡ್ 45 ಕೆ.ಎಲ್.ಪಿ.ಡಿ ಸಾಮರ್ಥ್ಯದ ಇಥೆನಾಲ್ ಘಟಕ ಸ್ಥಾಪನೆಗೆ **"ಪರಿಸರ ವಿಮೋಚನಾ"** ಪತ್ರವನ್ನು ನೀಡಿರುತ್ತದೆ ಎಂಬುದನ್ನು ಈ ಮೂಲಕ ಸಾರ್ವಜನಿಕರ ಗಮನಕ್ಕೆ ತರಲಾಗಿದೆ. **ಪರಿಸರ ವಿಮೋಚನಾ** ಪತ್ರವು ಕರ್ನಾಟಕ ರಾಜ್ಯ ಪರಿಸರ ಮಾಲಿನ್ಯ ನಿಯಂತ್ರಣ ಮಂಡಳಿ (Karnataka State Pollution Control Board -KSPCB) ಯಲ್ಲಿ ಲಭ್ಯವಿರುತ್ತದೆ. ಕೇಂದ್ರ ಪರಿಸರ ಮಂತ್ರಾಲಯದ ವೆಬ್‌ಸೈಟ್ https://parivesh.nic.in/ನಲ್ಲೂ ಸಹ ನೋಡಬಹುದಾಗಿದೆ.

ಸಹಿ/– ಜಿ. ಎಮ್. ಪಾಟೀಲ
ವ್ಯವಸ್ಥಾಪಕ ನಿರ್ದೇಶಕರು

ಸಹಿ/– ಬಿ.ಆರ್. ಬಾಳೇಕುಂದರಗಿ
ಅಧ್ಯಕ್ಷರು.

ನೈಋತ್ಯ ರೈಲ್ವೆ

ರೈಲ್ವೆ ಸಚಿವಾಲಯ
ಅಧಿಸೂಚನೆ
ಬೆಂಗಳೂರು, 16 ಏಪ್ರಿಲ್, 2026

S.O.1933(E).- ರೈಲ್ವೆ ಕಾಯ್ದೆ, 1989 (1989 ರ 24) (ಇನ್ನು ಮುಂದೆ ಸದರಿ ಕಾಯ್ದೆ ಎಂದು ಉಲ್ಲೇಖಿಸಲಾಗಿದೆ) ರ ಸೆಕ್ಷನ್ 20A ರ ಉಪ–ವಿಭಾಗ (1) ರಿಂದ ನೀಡಲಾದ ಅಧಿಕಾರಗಳನ್ನು ಚಲಾಯಿಸುವಾಗ, ಕೇಂದ್ರ ಸರ್ಕಾರವು ಸಾರ್ವಜನಿಕ ಉದ್ದೇಶಕ್ಕಾಗಿ, ಇಲ್ಲಿ ಲಗತ್ತಿಸಲಾದ ವೇಳಾಪಟ್ಟಿಯಲ್ಲಿ ನೀಡಲಾದ ಸಂಕ್ಷಿಪ್ತ ವಿವರಣೆಯನ್ನು ವಿಶೇಷ ರೈಲ್ವೆ ಯೋಜನೆಯ ಕಾರ್ಯಗತಗೊಳಿಸುವಿಕೆಗೆ ಅಗತ್ಯವಿದೆ ಎಂದು ತೃಪ್ತಿಪಡಿಸಿದ ನಂತರ, ಕರ್ನಾಟಕ ರಾಜ್ಯದಲ್ಲಿ "ರಾಣೆಬೆನ್ನೂರು ಯಾರ್ಡ್ (ರಾಣೆಬೆನ್ನೂರು ನಗರ)ದಲ್ಲಿ ಕಿ.ಮೀ: 359/500–600 ರಲ್ಲಿ LC ಸಂಖ್ಯೆ 217 ರ ಬದಲಿಗೆ ROB ನಿರ್ಮಾಣ", ಅಂತಹ ಭೂಮಿಯನ್ನು ಸ್ವಾಧೀನಪಡಿಸಿಕೊಳ್ಳುವ ಉದ್ದೇಶವನ್ನು ಈ ಮೂಲಕ ಘೋಷಿಸುತ್ತದೆ:

ಈ ಭೂಮಿಯಲ್ಲಿ ಆಸಕ್ತಿ ಹೊಂದಿರುವ ಯಾವುದೇ ವ್ಯಕ್ತಿಯು, ಅಧಿಕೃತ ಗೆಜೆಟ್‌ನಲ್ಲಿ ಈ ಅಧಿಸೂಚನೆಯನ್ನು ಪ್ರಕಟಿಸಿದ ದಿನಾಂಕದಿಂದ ಮೂವತ್ತು ದಿನಗಳ ಒಳಗೆ, ಸದರಿ ಕಾಯ್ದೆಯ ಸೆಕ್ಷನ್ 20D ಯ ಉಪ–ವಿಭಾಗ (1) ರ ಅಡಿಯಲ್ಲಿ ಮೇಲೆ ತಿಳಿಸಲಾದ ಉದ್ದೇಶಕ್ಕಾಗಿ ಆಕ್ಷೇಪಣೆ ಸಲ್ಲಿಸಬಹುದು ಮತ್ತು ಅಂತಹ ಭೂಮಿಯನ್ನು ಬಳಸಬಹುದು:

ಅಂತಹ ಪ್ರತಿಯೊಂದು ಆಕ್ಷೇಪಣೆಯನ್ನು "ರಾಣೆಬೆನ್ನೂರು ಅಂಗಳದಲ್ಲಿ (ರಾಣೆಬೆನ್ನೂರು ನಗರ) ಕಿ.ಮೀ. 359/500–600 ರಲ್ಲಿ LC ಸಂಖ್ಯೆ 217 ರ ಬದಲಿಗೆ ROB ನಿರ್ಮಾಣ" ಕ್ಕಾಗಿ ಸಕ್ಷಮ ಪ್ರಾಧಿಕಾರಕ್ಕೆ, ಅಂದರೆ ಉಸ್ತುವಾರಿ ಭೂಸ್ವಾಧೀನ ಅಧಿಕಾರಿ ಹಾವೇರಿ ಸಹಾಯಕ ಆಯುಕ್ತರು ಮತ್ತು ಪ್ರಾದೇಶಿಕ ಆಯುಕ್ತರು, ಬೆಳಗಾವಿಗೆ ಲಿಖಿತವಾಗಿ ಸಲ್ಲಿಸಬೇಕು ಮತ್ತು ಅದರ ಆಧಾರಗಳನ್ನು ವಿವರಿಸಬೇಕು ಮತ್ತು ಸಕ್ಷಮ ಪ್ರಾಧಿಕಾರವು ಆಕ್ಷೇಪಣೆದಾರರಿಗೆ ವೈಯಕ್ತಿಕವಾಗಿ ಅಥವಾ ಕಾನೂನು ವೃತ್ತಿಪರರ ಮೂಲಕ ಕೇಳಲು ಅವಕಾಶವನ್ನು ನೀಡಬೇಕು ಮತ್ತು ಅಂತಹ ಎಲ್ಲಾ ಆಕ್ಷೇಪಣೆಗಳನ್ನು ಆಲಿಸಿದ ನಂತರ ಮತ್ತು ಹೆಚ್ಚಿನ ವಿಚಾರಣೆಯನ್ನು ಮಾಡಿದ ನಂತರ, ಯಾವುದಾದರೂ ಇದ್ದರೆ, ಸಕ್ಷಮ ಪ್ರಾಧಿಕಾರವು ಅಗತ್ಯವೆಂದು ಭಾವಿಸಿದಂತೆ, ಆದೇಶದ ಮೂಲಕ, ಆಕ್ಷೇಪಣೆಗಳನ್ನು ಅನುಮತಿಸಬಹುದು ಅಥವಾ ನಿರಾಕರಿಸಬಹುದು:

ಸದರಿ ಕಾಯ್ದೆಯ ಸೆಕ್ಷನ್ 20D ಯ ಉಪ–ವಿಭಾಗ (2) ರ ಅಡಿಯಲ್ಲಿ ಸಕ್ಷಮ ಪ್ರಾಧಿಕಾರವು ಮಾಡಿದ ಯಾವುದೇ ಆದೇಶವು ಅಂತಿಮವಾಗಿರುತ್ತದೆ:

ಭೂಮಿ ಈ ಅಧಿಸೂಚನೆಯ ಅಡಿಯಲ್ಲಿ ಬರುವ ಭೂಮಿಯ ನಕ್ಷೆಗಳು ಮತ್ತು ಇತರ ವಿವರಗಳು ಲಭ್ಯವಿದೆ ಮತ್ತು ಆಸಕ್ತ ವ್ಯಕ್ತಿಯು ಮೇಲೆ ತಿಳಿಸಲಾದ ಸಕ್ಷಮ ಪ್ರಾಧಿಕಾರದ ಕಚೇರಿಯಲ್ಲಿ ಪರಿಶೀಲಿಸಬಹುದು.

ವೇಳಾಪಟ್ಟಿ

ಕ್ರ. ಸಂ.	ಗ್ರಾಮದ ಹೆಸರು	ಸರ್ವೆ ನಂ.	ಭಾಗ	ಹೆಕ್ಟೇರ್‌ನಲ್ಲಿ ವಿಸ್ತೀರ್ಣ
1	ರಾಣೆಬೆನ್ನೂರು ನಗರ	827	E	0.1113
2	ರಾಣೆಬೆನ್ನೂರು ನಗರ	785	B	0.0405
3	ರಾಣೆಬೆನ್ನೂರು ನಗರ	785	-	0.0152
4	ರಾಣೆಬೆನ್ನೂರು ನಗರ	780	B	0.0506
				0.0057
				0.9510
				0.0809
5	ರಾಣೆಬೆನ್ನೂರು ನಗರ	781	2D+2E/1, 2,3,4+2F	0.0759
				0.0253
				0.0297
6	ರಾಣೆಬೆನ್ನೂರು ನಗರ	782	-	0.1138
				0.0835
				0.0708
				0.0278
				0.0253
7	ರಾಣೆಬೆನ್ನೂರು ನಗರ	778	-	0.0531
				0.0430
ಒಟ್ಟು				**1.8034**

ನಂ.ಡಬ್ಲ್ಯೂ.271/ಸಿಎನ್/ಬಿಎನ್‌ಸಿ/2026–27/ಲ್ಯಾಂಡ್ ಎಸ್‌ಆರ್‌ಪಿ/1727

ವಿವರಗಳಿಗೆ **https://egazette.gov.in** ಗೆ ಲಾಗ್ ಆನ್ ಮಾಡಿ.

ಸಹಿ/–
ಪ್ರದೀಪ್ ಪುರಿ,
ಮುಖ್ಯ ಎಂಜಿನಿಯರ್–III, ನಿರ್ಮಾಣ,
ಬೆಂಗಳೂರು ಕಂಟೋನ್ಮೆಂಟ್

ಪಿಯುಬಿ/94/ಎಎಎಸ್/ಪಿಆರ್‌ಬಿ/ಎಸ್‌ಡಬ್ಲ್ಯುಆರ್/2026–27

ಸುಲಭ ಟಿಕೆಟ್ ಬುಕಿಂಗ್, PNR ಸ್ಥಿತಿ ಮತ್ತು ಹೆಚ್ಚಿನ ರೈಲ್ವೆ ಸೇವೆಗಳಿಗಾಗಿ **RailOne** ಅಪ್ಲಿಕೇಶನ್ ಡೌನ್‌ಲೋಡ್ ಮಾಡಿ.

South Western Railway-SWR | SWRRLY | @SWRAILWAYHQ | @sw_railways

ನೈಋತ್ಯ ರೈಲ್ವೆ

ರೈಲ್ವೆ ಸಚಿವಾಲಯ
ಅಧಿಸೂಚನೆ
ಬೆಂಗಳೂರು, 9 ಏಪ್ರಿಲ್, 2026

S.O.1825(E). – ರೈಲ್ವೆ ಕಾಯ್ದೆ, 1989 (1989 ರ ಕಾಯ್ದೆ ಸಂಖ್ಯೆ 24) ರ ಸೆಕ್ಷನ್ 2 ರ ಷರತ್ತು 37(A) ಅಡಿಯಲ್ಲಿ ನೀಡಲಾದ ಅಧಿಕಾರವನ್ನು ಚಲಾಯಿಸಿ, ಭಾರತ ಸರ್ಕಾರದ ರೈಲ್ವೆ ಸಚಿವಾಲಯ (ನೈಋತ್ಯ ರೈಲ್ವೆ, ನಿರ್ಮಾಣ ಸಂಸ್ಥೆ, ಬೆಂಗಳೂರು ಕಂಟೋನ್ಮೆಂಟ್), ಕೆಳಗಿನ ಕೋಷ್ಟಕದಲ್ಲಿ ಉಲ್ಲೇಖಿಸಲಾದ ಯೋಜನೆಗಳು ಕರ್ನಾಟಕ ರಾಜ್ಯದಲ್ಲಿ ಸಾರ್ವಜನಿಕ ಉದ್ದೇಶಕ್ಕಾಗಿ ರಾಷ್ಟ್ರೀಯ ಮೂಲಸೌಕರ್ಯವನ್ನು ಒದಗಿಸಲು "ವಿಶೇಷ ರೈಲ್ವೆ ಯೋಜನೆ" ಎಂದು ಅಧಿಕೃತ ಗೆಜೆಟ್‌ನಲ್ಲಿ ಅಧಿಸೂಚನೆ ಪ್ರಕಟವಾದ ದಿನಾಂಕದಿಂದ ಜಾರಿಗೆ ಬರುವಂತೆ ಸೂಚಿಸುತ್ತವೆ.

ಕ್ರ. ಸಂ.	ಯೋಜನೆಯ ಹೆಸರು	ಗ್ರಾಮ	ತಾಲ್ಲೂಕು	ಜಿಲ್ಲೆ
1	ಹುಬ್ಬಳ್ಳಿ ವಿಭಾಗ–ಪ್ರಸ್ತಾಪಿಸಲಾಗಿದೆ ಹುಲ್ಕೋಟಿ–ಚಿಕ್ಕಂಡಿಗೋಳ ರಸ್ತೆಯಲ್ಲಿರುವ ಹುಲ್ಕೋಟಿ ಯಾರ್ಡ್‌ನಲ್ಲಿ ಹುಲ್ಕೋಟಿ ಮತ್ತು ಗದಗ ನಿಲ್ದಾಣಗಳ ನಡುವೆ ಕಿ.ಮೀ.46/100–200 ರಲ್ಲಿ 1x9.25x5.5 ಮೀ ಗಾತ್ರದ ಎಲ್‌ಸಿ ಸಂಖ್ಯೆ 26 ರ ಬದಲಿಗೆ ಆರ್‌ಯುಬಿ ನಿರ್ಮಾಣಕ್ಕೆ ಪ್ರಸ್ತಾವಿತ.	ಹುಲ್ಕೋಟಿ	ಗದಗ	ಗದಗ

ನಂ.ಡಬ್ಲ್ಯೂ.271/ಸಿಎನ್/ಬಿಎನ್‌ಸಿ/2026–27/ಲ್ಯಾಂಡ್ ಎಸ್‌ಆರ್‌ಪಿ/1727

ಹೆಚ್ಚಿನ ವಿವರಗಳಿಗೆ **https://egazette.gov.in** ಗೆ ಲಾಗ್‌ಆನ್ ಮಾಡಿ.

ಅಜಯ್ ಶರ್ಮ,
ಮುಖ್ಯ ಆಡಳಿತಾಧಿಕಾರಿ/ನಿರ್ಮಾಣ/ಬೆಂಗಳೂರು ದಂಡು

ಪಿಯುಬಿ/93/ಎಎಎಸ್/ಪಿಆರ್‌ಬಿ/ಎಸ್‌ಡಬ್ಲ್ಯುಆರ್/2026–27

ಸುಲಭ ಟಿಕೆಟ್ ಬುಕಿಂಗ್, PNR ಸ್ಥಿತಿ ಮತ್ತು ಹೆಚ್ಚಿನ ರೈಲ್ವೆ ಸೇವೆಗಳಿಗಾಗಿ **RailOne** ಅಪ್ಲಿಕೇಶನ್ ಡೌನ್‌ಲೋಡ್ ಮಾಡಿ.

South Western Railway-SWR | SWRRLY | @SWRAILWAYHQ | @sw_railways

ನೈಋತ್ಯ ರೈಲ್ವೆ

ರೈಲ್ವೆ ಸಚಿವಾಲಯ
ಅಧಿಸೂಚನೆ
ಬೆಂಗಳೂರು, 24 ಏಪ್ರಿಲ್, 2026

S.O.2080(E).– ರೈಲ್ವೆ ಕಾಯ್ದೆ, 1989 (1989ರ 24)ರ ಸೆಕ್ಷನ್ 20F ನ ಷರತ್ತು (6) ಮತ್ತು ಸೆಕ್ಷನ್–2ರ ಷರತ್ತು 7Aಯಿಂದ ನೀಡಲಾದ ಅಧಿಕಾರಗಳನ್ನು ಚಲಾಯಿಸುವಾಗ, ರೈಲ್ವೆ ಸಚಿವಾಲಯ (ನೈಋತ್ಯ ರೈಲ್ವೆ, ನಿರ್ಮಾಣ ಸಂಸ್ಥೆ, ಬೆಂಗಳೂರು ಕಂಟೋನ್ಮೆಂಟ್) ಕೆಳಗಿನ ಕೋಷ್ಟಕದ ಕಾಲಮ್ (4)ರಲ್ಲಿ ಉಲ್ಲೇಖಿಸಲಾದ ಅಧಿಕಾರಿಯನ್ನು **'ಸಮರ್ಥ ಅಧಿಕಾರಿ'** ಎಂದು ಮತ್ತು ಕೆಳಗಿನ ಕೋಷ್ಟಕದ ಕಾಲಮ್ (5)ರಲ್ಲಿ ಉಲ್ಲೇಖಿಸಲಾದ ಅಧಿಕಾರಿಯನ್ನು **'ಮಧ್ಯಸ್ಥಗಾರ'** ಎಂದು ಅಧಿಕಾರ ನೀಡುತ್ತದೆ, ಈ ಅಧಿಸೂಚನೆಯನ್ನು ಅಧಿಕೃತ ಗೆಜೆಟ್‌ನಲ್ಲಿ ಪ್ರಕಟಿಸಿದ ದಿನಾಂಕದಿಂದ ಜಾರಿಗೆ ಬರುವಂತೆ, ಸಾರ್ವಜನಿಕ ಉದ್ದೇಶಕ್ಕಾಗಿ ಅಗತ್ಯವಿರುವ ಭೂಸ್ವಾಧೀನಕ್ಕಾಗಿ ಕೆಳಗಿನ ಕೋಷ್ಟಕದ ಕಾಲಮ್ (3)ರಲ್ಲಿ ಉಲ್ಲೇಖಿಸಲಾದ ಜಿಲ್ಲೆಗಳಿಗೆ ಸಂಬಂಧಿಸಿದಂತೆ.

ಕ್ರಮ ಸಂಖ್ಯೆ	ಯೋಜನೆಯ ಹೆಸರು	ಜಿಲ್ಲೆ	ಸಕ್ಷಮ ಪ್ರಾಧಿಕಾರ	ಮಧ್ಯಸ್ಥಗಾರ
1	ಹೊಸಪೇಟೆ–ಬಳ್ಳಾರಿ ನಿಲ್ದಾಣಗಳ ನಡುವಿನ ಚತುರ್ಭುಜ (65ಕಿ.ಮೀ)	ವಿಜಯನಗರ	ಸಹಾಯಕ ಆಯುಕ್ತರು ಹೊಸಪೇಟೆ	ಪ್ರಾದೇಶಿಕ ಆಯುಕ್ತರು, ಕಲಬುರ್ಗಿ
		ಬಳ್ಳಾರಿ	ಸಹಾಯಕ ಆಯುಕ್ತರು ಬಳ್ಳಾರಿ	

[F.No.W.271/CN/BNC/2026-27 Land SRP/1727]

ಹೆಚ್ಚಿನ ಮಾಹಿತಿಗಳಿಗಾಗಿ: **https://egazette.gov.in** ಲಾಗಿನ್ ಮಾಡಿ

ಪ್ರದೀಪ್ ಪುರಿ
ಮುಖ್ಯ ಅಭಿಯಂತರರು, ಬೆಂಗಳೂರು ದಂಡು

PUB/88/AAD360/PRB/SWR/2026-27

ಸುಲಭ ಟಿಕೆಟ್ ಬುಕಿಂಗ್, ಪಿಎನ್‌ಆರ್ ಸ್ಥಿತಿ ಪರಿಶೀಲನೆ ಮತ್ತು ಹೆಚ್ಚಿನ ರೈಲ್ವೆ ಸೇವೆಗಳಿಗಾಗಿ **RailOne** ಅಪ್ಲಿಕೇಶನ್ ಡೌನ್‌ಲೋಡ್ ಮಾಡಿ.

South Western Railway - SWR | SWRRLY | @SWRAILWAYHQ | @sw_railways

ಸಾರ್ವಜನಿಕ ಪ್ರಕಟಣೆ

ಈ ಮೂಲಕ ಸಾರ್ವಜನಿಕರಿಗೆ ತಿಳಿಸುವುದೇನೆಂದರೆ, ಶ್ರೀಮತಿ ಲಕ್ಷ್ಮಿಬಾಯಿ ಕೋಂ ಲಕ್ಯನಾಯ್ಕ, ನಂ.28, ಶ್ರೀ ಲಕ್ಷ್ಮಿ ನಿಲಯ, ಅಲಗಿಲವಾಡ ದೊಡ್ಡ ತಾಂಡ, ಶಿವಪುರ, ಸೇವಲಾಲ್ ದೇವಸ್ಥಾನದ ಹಿಂಭಾಗ, ಹರಪನಹಳ್ಳಿ ತಾಲೂಕು, ವಿಜಯನಗರ ಜಿಲ್ಲೆ–583137 ಇವರು ಹಪರಪನಹಳ್ಳಿ ತಾಲೂಕು, ಚಿರಸ್ತಹಳ್ಳಿ ಗ್ರಾಮ ಪಂಚಾಯಿತಿಗೊಳಪಟ್ಟ ಶಿವಪುರ ಗ್ರಾಮದ ಆಸ್ತಿ ನಂ. 28, ಇದರ ಇ–ಸ್ವತ್ತು (ಫಾರಂ ನಂ. 11 ಎ) ನಂ. 151200400800300109, ಆಸ್ತಿಯ ಮಾಲೀಕರಿರುತ್ತಾರೆ. ಸದರಿ ಆಸ್ತಿಯನ್ನು ದಿನಾಂಕ 30–04–2026 ರ ಹಕ್ಕು ಖುಲಾಸೆ ಪತ್ರದ ಸಂಖ್ಯೆ 1701/26–27 ರ ಮುಖಾಂತರ ಹೊಂದಿರುತ್ತಾರೆ. ಸದರಿ ಹಕ್ಕು ಖುಲಾಸೆ ಪತ್ರವನ್ನು ಶ್ರೀಮತಿ ಶ್ರೀಮತಿ ಲಕ್ಷ್ಮಿಬಾಯಿ ಇವರಿಗೆ ಸದರಿ ಶ್ರೀಮತಿ ಲಕ್ಷ್ಮಿಬಾಯಿ ಇವರ ಪತಿಯವರಾದ ಶ್ರೀ ಲಕ್ಯನಾಯ್ಕ ಮತು ಇವರ ಮಕ್ಕಳಾದ ಶ್ರೀ ಲೋಹಿತ್ ಕುಮಾರ್ ನಾಯ್ಕ ಡಿ.ಎ. ಮತ್ತು ಶ್ರೀ ಪುನೀತ್‌ಕುಮಾರ್ ನಾಯ್ಕ ಡಿ.ಎಲ್. ಇವರು ಬರೆದುಕೊಟ್ಟಿರುತ್ತಾರೆ. ಸದರಿ ಶ್ರೀಮತಿ ಲಕ್ಷ್ಮಿಬಾಯಿ ಇವರಿಗೆ, ದಾವಣಗೆಯ ಟಾಟಾ ಕ್ಯಾಪಿಟಲ್ ಹೌಸಿಂಗ್ ಫೈನಾನ್ಸ್ ಲಿ., ಇವರು ಸದರಿ ಆಸ್ತಿಯನ್ನು ಆಧಾರ ಮಾಡಿಕೊಂಡು ಸಾಲ ನೀಡುತ್ತಿದ್ದು, ಸದರಿ ಹಕ್ಕು ಖುಲಾಸೆ ಪತ್ರಕ್ಕೆ ಯಾರದ್ದಾದರು ತ0ಟೆ, ತಕರಾರು ಇತ್ಯಾದಿ ಇದ್ದಲ್ಲಿ, ಸೂಕ್ತ ದಾಖಲಾತಿ ಮತ್ತು ಮಾಹಿತಿಯೊಂದಿಗೆ 7 ದಿನದೊಳಗಾಗಿ ಈ ಕೆಳಕ0ಡ ವಿಳಾಸಕ್ಕೆ ಸಂಪರ್ಕಿಸಿ ಮಾಹಿತಿ ನೀಡುವಂತೆ ಕೋರಲಾಗಿದೆ.

ಸಹಿ/– ಎ.ಎಂ. ಹಿರೇ ಕೊಟ್ರೇಶ್
ವಕೀಲರು, ಮಾವಿನತೋಪು ಆಸ್ಪತ್ರೆ ಎದುರುಗಡೆ,
ಶ್ಯಾಬನೂರು ರಸ್ತೆ, ಎಸ್.ಎಸ್. ಮಾಲ್ ಹತ್ತಿರ
ದಾವಣಗೆರೆ. ಮೊ. 94483 38532.

ದಾವಣಗೆರೆ
ದಿನಾಂಕ: 05–05–2026

ಬೆಂಗಳೂರು ಉತ್ತರ ನಗರ ಪಾಲಿಕೆ

ಕಾರ್ಯಪಾಲಕ ಅಭಿಯಂತರರ ಕಛೇರಿ, ವಲಯ–1,
ಸರ್ವಜ್ಞನಗರ ವಿಭಾಗ, 9ನೇ 'ಸಿ' ಮುಖ್ಯರಸ್ತೆ, ಹೆಚ್‌ಆರ್‌ಬಿಆರ್ ಲೇಔಟ್,
1ನೇ ಬ್ಲಾಕ್, ಕಲ್ಯಾಣನಗರ, ಬೆಂಗಳೂರು – 560043.

ಸಂಖ್ಯೆ: ಕಾಅ/ಎಸ್‌ಜಿಎನ್/ಕೆಪಿಪಿಪಿ/ಟೆಂಡರ್/02/2026–27 ದಿನಾಂಕ: 05–05–2026

ಅಲ್ಪಾವಧಿ ಟೆಂಡರ್ ಆಹ್ವಾನ ಪ್ರಕಟಣೆ (ಎನ್‌ಐಟಿ)

(ದ್ವಿ–ಲಕೋಟೆ ಪದ್ಧತಿ) (ಜಿಕೆ ಕರ್ನಾಟಕ ಪಬ್ಲಿಕ್ ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮೂಲಕ ಮಾತ್ರ)

ಕಾರ್ಯಪಾಲಕ ಅಭಿಯಂತರರು (ಸರ್ವಜ್ಞನಗರ ವಿಭಾಗ), ಬೆಂಉನಪಾ, ವಲಯ–1, ಬೆಂಗಳೂರು ಇವರು ಗ್ರೇಟರ್ ಬೆಂಗಳೂರು ಪ್ರಾಧಿಕಾರದಲ್ಲಿ ನೋಂದಾಯಿತ ಅಥವಾ ಸಿಪಿಡಬ್ಲ್ಯೂಡಿ / ಕೆಪಿಡಬ್ಲ್ಯೂಡಿ / ರೈಲ್ವೇಸ್ / ಎಂಇಎಸ್ / ರಾಷ್ಟ್ರೀಯ ಹೆದ್ದಾರಿ ಅಥವಾ ಯಾವುದೇ ರಾಜ್ಯ ಸರ್ಕಾರದ ಸಂಸ್ಥೆಗಳಲ್ಲಿ ತತ್ಸಮಾನ ನೋಂದಾಯಿಸಿರುವ ಅರ್ಹ ಗುತ್ತಿಗೆದಾರರಿಂದ ಈ ಕೆಳಕಂಡ ನಿರ್ಮಾಣ ಕಾಮಗಾರಿಗಳಿಗಾಗಿ ಟೆಂಡರ್‌ಗಳನ್ನು ಆಹ್ವಾನಿಸಿದ್ದಾರೆ.

(ಸ್ಟ್ಯಾಂಡರ್ಡ್ ಟೆಂಡರ್ ಡಾಕ್ಯೂಮೆಂಟ್–ಕೆಡಬ್ಲ್ಯೂ–1, ಕೆಡಬ್ಲ್ಯೂ–2 & ಕೆಡಬ್ಲ್ಯೂ–3)

ಕ್ರ. ಸಂ.	ಕಾಮಗಾರಿಯ ಹೆಸರು / ಪ್ರವರ್ಗ
1	ವಾರ್ಡ್ ಸಂಖ್ಯೆ. 22, ನಾಗವಾರದಲ್ಲಿ ಪಾದಚಾರಿ ಮಾರ್ಗಗಳ ದುರಸ್ತಿ ಮತ್ತು ನಿರ್ವಹಣೆ ಕಾಮಗಾರಿ. **(ಪ್ರವರ್ಗ–11(ಎ)) – ಕಾಮಗಾರಿಯ ಅಂದಾಜು ಮೊತ್ತ (ರೂ. ಲಕ್ಷಗಳಲ್ಲಿ): 25.00, ಇ.ಎಂ.ಡಿ ಮೊತ್ತ (ರೂ. ಗಳಲ್ಲಿ): 25,000/–**
2	ವಾರ್ಡ್ ಸಂಖ್ಯೆ. 23, ಹೆಣ್ಣೂರುನಲ್ಲಿ ಪಾದಚಾರಿ ಮಾರ್ಗಗಳ ದುರಸ್ತಿ ಮತ್ತು ನಿರ್ವಹಣೆ ಕಾಮಗಾರಿ. **(ಇತರೆ) – ಕಾಮಗಾರಿಯ ಅಂದಾಜು ಮೊತ್ತ (ರೂ. ಲಕ್ಷಗಳಲ್ಲಿ): 25.00, ಇ.ಎಂ.ಡಿ ಮೊತ್ತ (ರೂ. ಗಳಲ್ಲಿ): 50,000/–**
3	ವಾರ್ಡ್ ಸಂಖ್ಯೆ. 24, ಹೆಚ್‌ಬಿಆರ್ ಲೇಔಟ್‌ನಲ್ಲಿ ಪಾದಚಾರಿ ಮಾರ್ಗಗಳ ದುರಸ್ತಿ ಮತ್ತು ನಿರ್ವಹಣೆ ಕಾಮಗಾರಿ. **(ಪ್ರವರ್ಗ–11(ಎ)) – ಕಾಮಗಾರಿಯ ಅಂದಾಜು ಮೊತ್ತ (ರೂ. ಲಕ್ಷಗಳಲ್ಲಿ): 25.00, ಇ.ಎಂ.ಡಿ ಮೊತ್ತ (ರೂ. ಗಳಲ್ಲಿ): 25,000/–**
4	ವಾರ್ಡ್ ಸಂಖ್ಯೆ. 25, ಗೋವಿಂದಪುರದಲ್ಲಿ ಪಾದಚಾರಿ ಮಾರ್ಗಗಳ ದುರಸ್ತಿ ಮತ್ತು ನಿರ್ವಹಣೆ ಕಾಮಗಾರಿ. **(ಎಸ್.ಟಿ) – ಕಾಮಗಾರಿಯ ಅಂದಾಜು ಮೊತ್ತ (ರೂ. ಲಕ್ಷಗಳಲ್ಲಿ): 25.00, ಇ.ಎಂ.ಡಿ ಮೊತ್ತ (ರೂ. ಗಳಲ್ಲಿ): 25,000/–**
5	ವಾರ್ಡ್ ಸಂಖ್ಯೆ. 28, ವೆಂಕಟೇಶಪುರಂನಲ್ಲಿ ಪಾದಚಾರಿ ಮಾರ್ಗಗಳ ದುರಸ್ತಿ ಮತ್ತು ನಿರ್ವಹಣೆ ಕಾಮಗಾರಿ. **(ಇತರೆ) – ಕಾಮಗಾರಿಯ ಅಂದಾಜು ಮೊತ್ತ (ರೂ. ಲಕ್ಷಗಳಲ್ಲಿ): 25.00, ಇ.ಎಂ.ಡಿ ಮೊತ್ತ (ರೂ. ಗಳಲ್ಲಿ): 50,000/–**
6	ವಾರ್ಡ್ ಸಂಖ್ಯೆ. 29, ಲಿಂಗರಾಜಪುರದಲ್ಲಿ ಪಾದಚಾರಿ ಮಾರ್ಗಗಳ ದುರಸ್ತಿ ಮತ್ತು ನಿರ್ವಹಣೆ ಕಾಮಗಾರಿ. **(ಇತರೆ) – ಕಾಮಗಾರಿಯ ಅಂದಾಜು ಮೊತ್ತ (ರೂ. ಲಕ್ಷಗಳಲ್ಲಿ): 25.00, ಇ.ಎಂ.ಡಿ ಮೊತ್ತ (ರೂ. ಗಳಲ್ಲಿ): 50,000/–**
7	ವಾರ್ಡ್ ಸಂಖ್ಯೆ. 30, ಕಚಾರಕನಹಳ್ಳಿಯಲ್ಲಿ ಪಾದಚಾರಿ ಮಾರ್ಗಗಳ ದುರಸ್ತಿ ಮತ್ತು ನಿರ್ವಹಣೆ ಕಾಮಗಾರಿ. **(ಇತರೆ) – ಕಾಮಗಾರಿಯ ಅಂದಾಜು ಮೊತ್ತ (ರೂ. ಲಕ್ಷಗಳಲ್ಲಿ): 25.00, ಇ.ಎಂ.ಡಿ ಮೊತ್ತ (ರೂ. ಗಳಲ್ಲಿ): 50,000/–**
8	ವಾರ್ಡ್ ಸಂಖ್ಯೆ. 31, ಕಲ್ಯಾಣನಗರದಲ್ಲಿ ಪಾದಚಾರಿ ಮಾರ್ಗಗಳ ದುರಸ್ತಿ ಮತ್ತು ನಿರ್ವಹಣೆ ಕಾಮಗಾರಿ. **(ಎಸ್.ಸಿ) – ಕಾಮಗಾರಿಯ ಅಂದಾಜು ಮೊತ್ತ (ರೂ. ಲಕ್ಷಗಳಲ್ಲಿ): 25.00, ಇ.ಎಂ.ಡಿ ಮೊತ್ತ (ರೂ. ಗಳಲ್ಲಿ): 25,000/–**
9	ವಾರ್ಡ್ ಸಂಖ್ಯೆ. 32, ಬಾಣಸವಾಡಿಯಲ್ಲಿ ಪಾದಚಾರಿ ಮಾರ್ಗಗಳ ದುರಸ್ತಿ ಮತ್ತು ನಿರ್ವಹಣೆ ಕಾಮಗಾರಿ. **(ಇತರೆ) – ಕಾಮಗಾರಿಯ ಅಂದಾಜು ಮೊತ್ತ (ರೂ. ಲಕ್ಷಗಳಲ್ಲಿ): 25.00, ಇ.ಎಂ.ಡಿ ಮೊತ್ತ (ರೂ. ಗಳಲ್ಲಿ): 50,000/–**
10	ವಾರ್ಡ್ ಸಂಖ್ಯೆ. 33, ಹೆಚ್‌ಆರ್‌ಬಿಆರ್ ಲೇಔಟ್‌ನಲ್ಲಿ ಪಾದಚಾರಿ ಮಾರ್ಗಗಳ ದುರಸ್ತಿ ಮತ್ತು ನಿರ್ವಹಣೆ ಕಾಮಗಾರಿ. **(ಎಸ್.ಸಿ) – ಕಾಮಗಾರಿಯ ಅಂದಾಜು ಮೊತ್ತ (ರೂ. ಲಕ್ಷಗಳಲ್ಲಿ): 25.00, ಇ.ಎಂ.ಡಿ ಮೊತ್ತ (ರೂ. ಗಳಲ್ಲಿ): 25,000/–**
11	ವಾರ್ಡ್ ಸಂಖ್ಯೆ. 34, ಸುಬ್ಬಯ್ಯನಪಾಳ್ಯದಲ್ಲಿ ಪಾದಚಾರಿ ಮಾರ್ಗಗಳ ದುರಸ್ತಿ ಮತ್ತು ನಿರ್ವಹಣೆ ಕಾಮಗಾರಿ. **(ಪ್ರವರ್ಗ–11(ಎ)) – ಕಾಮಗಾರಿಯ ಅಂದಾಜು ಮೊತ್ತ (ರೂ. ಲಕ್ಷಗಳಲ್ಲಿ): 25.00, ಇ.ಎಂ.ಡಿ ಮೊತ್ತ (ರೂ. ಗಳಲ್ಲಿ): 25,000/–**
12	ವಾರ್ಡ್ ಸಂಖ್ಯೆ. 35, ಕಮ್ಮನಹಳ್ಳಿಯಲ್ಲಿ ಪಾದಚಾರಿ ಮಾರ್ಗಗಳ ದುರಸ್ತಿ ಮತ್ತು ನಿರ್ವಹಣೆ ಕಾಮಗಾರಿ. **(ಪ್ರವರ್ಗ–11(ಎ)) – ಕಾಮಗಾರಿಯ ಅಂದಾಜು ಮೊತ್ತ (ರೂ. ಲಕ್ಷಗಳಲ್ಲಿ): 25.00, ಇ.ಎಂ.ಡಿ ಮೊತ್ತ (ರೂ. ಗಳಲ್ಲಿ): 25,000/–**
13	ವಾರ್ಡ್ ಸಂಖ್ಯೆ. 82, ಬಾಣಸವಾಡಿ ಇಲ್ಲಿನ 10ನೇ ಮುಖ್ಯರಸ್ತೆ, ಹೆಚ್‌ಆರ್‌ಬಿಆರ್ ಲೇಔಟ್‌ನ 1ನೇ ಬ್ಲಾಕ್ ಮತ್ತು ಸುತ್ತುಮುತ್ತ ಪ್ರದೇಶದ ರಸ್ತೆಗಳಲ್ಲಿ ಡಾಂಬರೀಕರಣ ಒದಗಿಸುವ ಕಾಮಗಾರಿ. **(ಇತರೆ) – ಕಾಮಗಾರಿಯ ಅಂದಾಜು ಮೊತ್ತ (ರೂ. ಲಕ್ಷಗಳಲ್ಲಿ): 50.00, ಇ.ಎಂ.ಡಿ ಮೊತ್ತ (ರೂ. ಗಳಲ್ಲಿ): 1,00,000/–**
14	ವಾರ್ಡ್ ಸಂಖ್ಯೆ. 85, ಮಾರುತಿ ಸೇವಾ ನಗರ ಇಲ್ಲಿನ ಮುನಿಗ ಲೇಔಟ್ ಮತ್ತು ಸುತ್ತುಮುತ್ತ ಪ್ರದೇಶದಲ್ಲಿ ರಸ್ತೆಗಳು ಹಾಗೂ ಚರಂಡಿಗಳ ಸುಧಾರಣೆಗಳ ಕಾಮಗಾರಿ. **(ಎಸ್.ಸಿ) – ಕಾಮಗಾರಿಯ ಅಂದಾಜು ಮೊತ್ತ (ರೂ. ಲಕ್ಷಗಳಲ್ಲಿ): 50.00, ಇ.ಎಂ.ಡಿ ಮೊತ್ತ (ರೂ. ಗಳಲ್ಲಿ): 50,000/–**
15	ವಾರ್ಡ್ ಸಂಖ್ಯೆ. 77, ನಾಗವಾರ ಇಲ್ಲಿನ ಗೋವಿಂದಪುರದ 14ನೇ ಅಡ್ಡರಸ್ತೆ ಮತ್ತು ಸುತ್ತುಮುತ್ತ ಪ್ರದೇಶದಲ್ಲಿ ರಸ್ತೆಗಳು ಹಾಗೂ ಚರಂಡಿಗಳ ಸುಧಾರಣೆಗಳ ಕಾಮಗಾರಿ. **(2ನೇ ಕರೆ) – (ಪ್ರವರ್ಗ–11(ಎ)) – ಕಾಮಗಾರಿಯ ಅಂದಾಜು ಮೊತ್ತ (ರೂ. ಲಕ್ಷಗಳಲ್ಲಿ): 50.00, ಇ.ಎಂ.ಡಿ ಮೊತ್ತ (ರೂ. ಗಳಲ್ಲಿ): 50,000/–**
16	ವಾರ್ಡ್ ಸಂಖ್ಯೆ. 81, ಕಮ್ಮನಹಳ್ಳಿ ಇಲ್ಲಿನ 5ನೇ ಮುಖ್ಯರಸ್ತೆ ಮತ್ತು ಸುತ್ತುಮುತ್ತ ಪ್ರದೇಶದ ರಸ್ತೆಗಳಲ್ಲಿ ಡಾಂಬರೀಕರಣ ಒದಗಿಸುವ ಕಾಮಗಾರಿ. **(2ನೇ ಕರೆ) – (ಪ್ರವರ್ಗ–11(ಎ)) – ಕಾಮಗಾರಿಯ ಅಂದಾಜು ಮೊತ್ತ (ರೂ. ಲಕ್ಷಗಳಲ್ಲಿ): 50.00, ಇ.ಎಂ.ಡಿ ಮೊತ್ತ (ರೂ. ಗಳಲ್ಲಿ): 50,000/–**
17	ವಾರ್ಡ್ ಸಂಖ್ಯೆ. 82, ಬಾಣಸವಾಡಿಯಲ್ಲಿ ಹೊಸ ಕಲ್ವರ್ಟ್‌ಗಳ ನಿರ್ಮಾಣ ಕಾಮಗಾರಿ. **(2ನೇ ಕರೆ) – (ಎಸ್.ಟಿ) – ಕಾಮಗಾರಿಯ ಅಂದಾಜು ಮೊತ್ತ (ರೂ. ಲಕ್ಷಗಳಲ್ಲಿ): 10.00, ಇ.ಎಂ.ಡಿ ಮೊತ್ತ (ರೂ. ಗಳಲ್ಲಿ): 12,500/–**
18	ವಾರ್ಡ್ ಸಂಖ್ಯೆ. 80, ಕಚಾರಕನಹಳ್ಳಿ ಇಲ್ಲಿನ ಹೆಚ್‌ಆರ್‌ಬಿಆರ್ ಲೇಔಟ್‌ನ 3ನೇ ಬ್ಲಾಕ್ ಹಾಗೂ ರಾಮಯ್ಯ ಲೇಔಟ್ ಮತ್ತು ಸುತ್ತುಮುತ್ತ ಪ್ರದೇಶದ ರಸ್ತೆಗಳಲ್ಲಿ ಡಾಂಬರೀಕರಣ ಒದಗಿಸುವ ಕಾಮಗಾರಿ. **ಕಾಮಗಾರಿಯ ಅಂದಾಜು ಮೊತ್ತ (ರೂ. ಲಕ್ಷಗಳಲ್ಲಿ): 75.00, ಇ.ಎಂ.ಡಿ ಮೊತ್ತ (ರೂ. ಗಳಲ್ಲಿ): 1,50,000/– (ರೂ. 1.00 ಲಕ್ಷ ಇ–ಪಾವತಿ ಮೂಲಕ ಬಾಕಿ ರೂ. 50,000/– ಬಿಜಿ / ಎಫ್‌ಡಿಆರ್ ಮೂಲಕ ತಾಂತ್ರಿಕ ಬಿಡ್ ತೆರೆಯುವ ಮೊದಲು ಸಲ್ಲಿಸಬೇಕು)**

ಟೆಂಡರ್ ವೇಳಾಪಟ್ಟಿ: 1) ಟೆಂಡರ್ ಡಾಕ್ಯೂಮೆಂಟ್‌ಗಳನ್ನು ಜಿಕೆ ಕರ್ನಾಟಕ ಪಬ್ಲಿಕ್ ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ವೆಬ್‌ಸೈಟ್: **https://kppp.karnataka.gov.in** ನಲ್ಲಿ ದಿನಾಂಕ: **11–05–2026** ರಿಂದ ಡೌನ್‌ಲೋಡ್ ಮಾಡಿಕೊಳ್ಳಬಹುದು. 2) ಬಿಡ್ ಪೂರ್ವಭಾವಿ ಸಭೆಯು ದಿನಾಂಕ: **16–05–2026 ರ ಬೆಳಿಗ್ಗೆ 11.00 ಗಂಟೆಗೆ ಕಾರ್ಯಪಾಲಕ ಅಭಿಯಂತರರ ಕಛೇರಿ, ಬಿಡಿಎ ಕಟ್ಟಡ, 9ನೇ 'ಸಿ' ಮುಖ್ಯರಸ್ತೆ, ಹೆಚ್‌ಆರ್‌ಬಿಆರ್ ಲೇಔಟ್, 1ನೇ ಬ್ಲಾಕ್, ಬಾಣಸವಾಡಿ, ಬೆಂಗಳೂರು ಇಲ್ಲಿ ನಡೆಯುವುದು.** 3) ಭರ್ತಿ ಮಾಡಿದ ಟೆಂಡರ್ ಡಾಕ್ಯೂಮೆಂಟ್‌ನ್ನು ಸಲ್ಲಿಸುವ ಕೊನೆಯ ದಿನಾಂಕ: **22–05–2026** ರಂದು **ಸಂಜೆ 4.00 ಗಂಟೆವರೆಗೆ.** 4) ಟೆಂಡರ್‌ಗಳನ್ನು ತೆರೆಯುವ ದಿನಾಂಕ: **25–05–2026 ರಂದು ಬೆಳಿಗ್ಗೆ 11.30 ಗಂಟೆಗೆ (ಸಾಧ್ಯವಾದಲ್ಲಿ ಅಥವಾ ಮುಂದಿನ ಕೆಲಸದ ದಿನದಂದು).** ಹೆಚ್ಚಿನ ಮಾಹಿತಿಗಾಗಿ ಮೇಲ್ಕಂಡ ಕಛೇರಿಯನ್ನು ಸಂಪರ್ಕಿಸಬಹುದು.

ಸಹಿ/– ಕಾರ್ಯಪಾಲಕ ಅಭಿಯಂತರರು
ಸರ್ವಜ್ಞನಗರ ವಿಭಾಗ, ವಲಯ–1, ಬೆಂಉನಪಾ.

IN THE COURT OF CITY CIVIL AND SESSION JUDGE AT BENGALURU

OS No. 4349 of 2023

Between :

M/s. Karnataka State Handicrafts Development Corporation Limited, Registered office at No. 39, United Mansion, 2nd Floor, M.G. Road, Bengaluru-560 001- Rep. by its Managing Director Smt. Bharathi

...Plaintiff

AND

Sri. G.C. Kishore Kumar & Others

...Defendants

SUMMON TO DEFENDANT No. 1, 5, 6, 7 and 8 (U/o 5 Rule of 20 of cpc)

1. Sri. G.C. Kishore Kumar
S/o Chikkaveranna, Major by age 56 Years, No. 542, Sonika Shelter, 2nd Floor, 4th Cross, 5th Main Road, in front of Mahatma Gandhi Park, Malagala, Nagarabhavi 2nd Stage, Bengaluru.

5. Sri. H.S. Nagalingaswamy,
S/o. Late Shivanna, Major by age 53 Years, Resident of D. Halasalli Village, Kasaba Hobli, Dhanaguru Post, Malavalli Taluk, Mandya District.

6. Sri. R. Raviraj,
S/o S.R. Raju, Major By age 62 Years, Residing at No. 42, 1st Main Road, 7th Cross Road, Raghavendra Block, Srinagar, Bengaluru.

7. Sri. Narasaiah D,
S/o Devadhanam, Major by Age 58 Years, Proprietor, PNP Enterprises, No. 70, Grace Tower, Millers Road, Bengaluru-560046.

8. PNP Enterprises,
A Proprietary Concern, No. 70, Grace Tower, Millers Road, Bengaluru-560046 Represented by its proprietor Sri. Narasaiah D

Whereas. the Plaintiff Corporation has filed the above suit against the Defendants for recovery of Rs. 25,83,60,294/- from the Defendants along interest and for other consequential reliefs.

That the Defendant No. 1, 5, 6, 7 and 8 are hereby summoned to appear in person or by pleader on **19.06.2026 at 11.00 A.M.** in the Court Hall No. 40, to answer the same, the case will be disposed of exparte.

Given under my hand and seal on this 2nd May 2026 at Bengaluru.

**By the order of the Court
Senior Sheristedar,
City Civil Court, Bengaluru.**

Advocate for Plaintiff:
B.S. Venkatanarayana &
Devaraja L, No. T-3, 27/1,
Shalimar Plaza, 10th Cross,
Palace Guttahalli Main Road,
Malleshwaram,
Bengaluru- 560 003.

ಕಾರಾಗೃಹ ಮತ್ತು ಸುಧಾರಣಾ ಸೇವೆ ಇಲಾಖೆ

ಮುಖ್ಯ ಅಧೀಕ್ಷಕರ ಕಾರ್ಯಾಲಯ, ಕೇಂದ್ರ ಕಾರಾಗೃಹ
ಪರಪ್ಪನ ಅಗ್ರಹಾರ, ಎಲೆಕ್ಟ್ರಾನಿಕ್ ಸಿಟಿ ಪೋಸ್ಟ್, ಬೆಂಗಳೂರು–560100,

ಸಂ.: ಕೇಕಾಬೆಂ/ದರಖಾಸ್ತು/1466/2026–27 ದಿನಾಂಕ: 05.05.2026

ಅಲ್ಪಾವಧಿ ಇ–ಟೆಂಡರ್ ನೋಟಿಸ್

2026–27ನೇ ಸಾಲಿಗೆ ಬೆಂಗಳೂರು ಕೇಂದ್ರ ಕಾರಾಗೃಹಕ್ಕೆ ಅವಶ್ಯವಿರುವ ಸಿ.ಸಿ.ಟಿ.ವಿ., ಎಕ್ಸ್–ರೇ ಬ್ಯಾಗೇಜ್ ಸ್ಕ್ಯಾನರ್‌ಗಳು, ಕಂಪ್ಯೂಟರ್ ಮತ್ತು ಪ್ರಿಂಟರ್‌ಗಳನ್ನು ಖರೀದಿಸುವ ಸಲುವಾಗಿ ಕೆ.ಟಿ.ಪಿ.ಪಿ ಕಾಯ್ದೆ ಮತ್ತು ನಿಯಮದನ್ವಯ ಅಲ್ಪಾವಧಿ ಇ–ದರಖಾಸ್ತು ಮೂಲಕ ಖರೀದಿಸಲು ನಿರ್ಧರಿಸಿದೆ.

ಕ್ರ. ಸಂ.	ಟೆಂಡರ್ ಇಂಡೆಂಟ್ ಸಂಖ್ಯೆ	ದರಖಾಸ್ತು ವಿವರ
1	ಇ–ಪೋರ್ಟಲ್‌ನಂತೆ PCSD/2026-27/ IND0267	ಬೆಂಗಳೂರು ಕೇಂದ್ರ ಕಾರಾಗೃಹದಲ್ಲಿ ಎ.ಐ ಸಾಮರ್ಥ್ಯದ ಐ.ಪಿ ಬೇಸಡ್ ಸಿ.ಸಿ.ಟಿ.ವಿ ಸಿಸ್ಟಮ್ ಅಳವಡಿಸುವ ಬಗ್ಗೆ.
2	ಇ–ಪೋರ್ಟಲ್‌ನಂತೆ PCSD/2026-27/ IND0268	ಬೆಂಗಳೂರು ಕೇಂದ್ರ ಕಾರಾಗೃಹಕ್ಕೆ ಕಂಪ್ಯೂಟರ್ ಮತ್ತು ಪ್ರಿಂಟರ್‌ಗಳನ್ನು ಖರೀದಿಸುವ ಬಗ್ಗೆ.
3	ಇ–ಪೋರ್ಟಲ್‌ನಂತೆ PCSD/2026-27/ IND0269	ಬೆಂಗಳೂರು ಕೇಂದ್ರ ಕಾರಾಗೃಹದಲ್ಲಿ ಎಕ್ಸ್–ರೇ ಬ್ಯಾಗೇಜ್ ಸ್ಕ್ಯಾನರ್ ಖರೀದಿಸುವ ಬಗ್ಗೆ.

ಇ.ಎಂ.ಡಿ ಮೊತ್ತ (ರೂ.ಗಳಲ್ಲಿ): ಇ–ಪೋರ್ಟಲ್‌ನಂತೆ. **ಬಿಡ್ ಸಲ್ಲಿಸಲು ಕೊನೆಯ ದಿನಾಂಕ:** ಇ–ಪೋರ್ಟಲ್‌ನಂತೆ. ದರಖಾಸ್ತುದಾರರು ಹೆಚ್ಚಿನ ಮಾಹಿತಿಯನ್ನು **kppp.karnataka.gov.in or Helpline No. +91-8046010000, +91-8068948777** ಗಳಿಗೆ ಸಂಪರ್ಕಿಸಿ ಪಡೆಯಬಹುದಾಗಿದೆ.

ಸಹಿ/– ಮುಖ್ಯ ಅಧೀಕ್ಷಕರು
ಕೇಂದ್ರ ಕಾರಾಗೃಹ, ಬೆಂಗಳೂರು.

DIPR/CP/503/SA/2026-27

ಕರ್ನಾಟಕ ರಾಜ್ಯ ಅಕ್ಕಮಹಾದೇವಿ ಮಹಿಳಾ ವಿಶ್ವವಿದ್ಯಾನಿಲಯ ವಿಜಯಪುರ.

ಕುಲಸಚಿವರ ಕಛೇರಿ, ಜ್ಞಾನ–ಶಕ್ತಿ ಆವರಣ (ತೊರವಿ)
ದೂರವಾಣಿ: 08352–297068, ವೆಬ್‌ಸೈಟ್:www.kswu.ac.in
No:KSAWUV/EXAM/E-Tender/2026-27/323 Date: 30.04.2026

ಅಲ್ಪಾವಧಿ ಟೆಂಡರ್ ಅಧಿಸೂಚನೆ ಪ್ರಕಟಣೆ

ಕರ್ನಾಟಕ ಸರ್ಕಾರದ ಸಂಗ್ರಹಣೆಗಳಲ್ಲಿ ಪಾರದರ್ಶಕತೆ ಆಧ್ಯಾದೇಶ 1992–2000ರ ಪ್ರಕಾರ ಅಧಿನಿಯಮ 2000ರ ನಿಯಮದಂತೆ ನೊಂದಾಯಿತ ಅರ್ಹ ಗುತ್ತಿಗೆದಾರರಿಂದ ಇ–ಪ್ರಾಕ್ಯೂರ್‌ಮೆಂಟ್ ಪೋರ್ಟಲ್ ಮುಖಾಂತರ ಟೆಂಡರನ್ನು ಈ ಕೆಳಕಂಡ ಸಹಿ ಮಾಡಿರುವವರು ಆಹ್ವಾನಿಸಿರುತ್ತಾರೆ.
ಉಳಿದ ವಿವರಗಳನ್ನು ಗುತ್ತಿಗೆ ದಸ್ತಾವೇಜುಗಳಲ್ಲಿ ನೋಡಬಹುದು.

01. ಕಾಮಗಾರಿಯ ಹೆಸರು: Printing and Supply of Theory Answer Booklets to Karnataka State Akkamahadevi Womens University Vijayapura. ಟೆಂಡರ ಮೊತ್ತ ರೂ. 1,48,80,000/–. ಟೆಂಡರ್ ಸಂಖ್ಯೆ: KSWU/2025-26/IND 0024/Call-2. ಬಡ್ಡಿ ರಹಿತ ಇ.ಎಂ.ಡಿ ರೂ. 2,23,500/–. ಅವಧಿ: 365 ದಿನಗಳು.

ಹೆಚ್ಚಿನ ವಿವರ / ವಿಚಾರಣೆಗೆ ಇ–ಪ್ರಾಕ್ಯೂರ್‌ಮೆಂಟ್ http://kppp.karnataka.gov.in ನಿಂದ ಟೆಂಡರ್ ದಾಖಲಾತಿಗಳನ್ನು ಡೌನಲೋಡ್ ಮಾಡಿಕೊಳ್ಳಬಹುದಾಗಿದೆ. ಏಜೆನ್ಸಿದಾರರ ಅರ್ಹತೆ / ಟೆಂಡರಿನ ನಿಯಮ/ ಟೆಂಡರ್ ಪ್ರೋಸೆಸ್ಸಿಂಗ್ ಶುಲ್ಕ, ತುಂಬುವ ವಿಧಾನ ಇತ್ಯಾದಿ ವಿವರಗಳಿಗೆ http://kppp.karnataka.gov.in ಮೂಲಕ ಮಾಹಿತಿಯನ್ನು ಪಡೆಯಬಹುದು. ಹೆಚ್ಚಿನ ಮಾಹಿತಿಯನ್ನು ಸದರಿ ಕಛೇರಿಯಿಂದ ಹಾಗೂ ಸಹಾಯಕ ದೂರವಾಣಿ ಸಂಖ್ಯೆ:08352–297068, 8722116613 ರಿಂದ ಪಡೆಯಬಹುದು.

ಸಹಿ/– ಕುಲಸಚಿವರು,
ಕರ್ನಾಟಕ ರಾಜ್ಯ ಅಕ್ಕಮಹಾದೇವಿ
ಮಹಿಳಾ ವಿಶ್ವವಿದ್ಯಾನಿಲಯ, ವಿಜಯಪುರ

ವಾಸಾಸಂಇ/ವಿಜಯಪುರ/77/
ಕೆಎಸ್‌ಎಂಸಿಎ/2026–27

ವಿಶ್ವೇಶ್ವರಯ್ಯ ಜಲ ನಿಗಮ ನಿಯಮಿತ

(ಕರ್ನಾಟಕ ಸರ್ಕಾರದ ಉದ್ಯಮ)
ಕಾರ್ಯಪಾಲಕ ಇಂಜಿನಿಯರ್ ರವರ ಕಛೇರಿ, ವಿಜನಿನಿ ಎತ್ತಿನಹೊಳೆ ಯೋಜನಾ ವಿಭಾಗ, ನಂ:4
ಮಧುಗಿರಿ, ತುಮಕೂರು ಜಿಲ್ಲೆ.–572132,
ದೂ ಸಂಖ್ಯೆ: 08137–282112 Email:eeyetmadhugiri4@gmail.com

ಕ್ರ.ಸಂ:ಕಾಇಂ/ವಿಜನಿನಿ/ಎಹೊಯೋ/ಮ/ವಿ.04/ಟೆ.ಅ–04&05/2026–27 ದಿನಾಂಕ : 24.04.2026

ಅಲ್ಪಾವಧಿ ಟೆಂಡರ್ ಪ್ರಕಟಣೆ (ಕೆ.ಪಿ.ಪಿ–ಪ್ರೊಕ್ಯೂರ್‌ಮೆಂಟ್ ಮುಖಾಂತರ)

ವ್ಯವಸ್ಥಾಪಕ ನಿರ್ದೇಶಕರು, ವಿಶ್ವೇಶ್ವರಯ್ಯ ಜಲ ನಿಗಮ ನಿಯಮಿತ. ಬೆಂಗಳೂರು ಇವರ ಪರವಾಗಿ ಈ ಕೆಳಗೆ ಸಹಿ ಮಾಡಿರುವವರಿಂದ ಕರ್ನಾಟಕ ಸರ್ಕಾರದ ಇ–ಪ್ರೊಕ್ಯೂರ್‌ಮೆಂಟ್ 2.0 ಪೋರ್ಟಲ್‌ನಲ್ಲಿ ಮಧುಗಿರಿ ವಿಭಾಗ ವ್ಯಾಪ್ತಿಯಲ್ಲಿ ಟೆಂಡರ್ ಅಧಿಸೂಚನೆ 04/2026–27 ದಿನಾಂಕ 29.04.2026ರಲ್ಲಿ ಎತ್ತಿನಹೊಳೆ ಯೋಜನೆಯಡಿ ರೂ.3089.65 ಲಕ್ಷದ ಸ್ವಿಚ್ಚಿಂಗ್ ಸ್ಟೇಷನ್ ಕಾಮಗಾರಿ ಹಾಗೂ ಟೆಂಡರ್ ಅಧಿಸೂಚನೆ 05/2026–27 ದಿನಾಂಕ : 29.04.2026 ರಲ್ಲಿ ನೆಲಮಂಗಲ ವಿಧಾನ ಸಭಾ ಕ್ಷೇತ್ರದ 02 ಕಾಮಗಾರಿಗಳಿಗೆ **ರೂ.253.40 & ರೂ.295.74** ಲಕ್ಷಗಳಿಗೆ ಟೆಂಡರ್ ಅಹ್ವಾನಿಸಲಾಗಿರುತ್ತದೆ. ಸದರಿ ಕಾಮಗಾರಿಗಳಿಗೆ Percentage Tender ಮೂಲಕ ಅರ್ಹ ಬಿಡ್ಡುದಾರರಿಂದ ಶೇಕಡಾವಾರು ದರಗಳ ಟೆಂಡರ್‌ಗಳನ್ನು ಆಹ್ವಾನಿಸಲಾಗಿದೆ. ಇ–ಪ್ರೊಕ್ಯೂರ್‌ಮೆಂಟ್‌ನ https://kppp.karnataka.gov.in ವೆಬ್ ಸೈಟ್ ಮೂಲಕ ಟೆಂಡರ್‌ಗಳನ್ನು ಸಲ್ಲಿಸಬಹುದಾದ ದಿನಾಂಕಗಳ ವಿವರ ಈ ಕೆಳಗಿನಂತಿದೆ.

ಕ್ರಸಂ	ಘಟನೆಗಳ ಕ್ಯಾಲೆಂಟರ್	ಟೆಂಡರ್ ಅಧಿಸೂಚನೆ:04/2026–27 ದಿನಾಂಕ: 29.04.2026 ರ ದಿನಾಂಕಗಳ ವಿವರ	ಟೆಂಡರ್ ಅಧಿಸೂಚನೆ:05/2026–27 ದಿನಾಂಕ: 29.04.2026ರ ದಿನಾಂಕಗಳ ವಿವರ
1	ಇ–ಪ್ರೊಕ್ಯೂರ್‌ಮೆಂಟ್ ನ https://kppp.karnataka.gov.in ವೆಬ್ ಸೈಟ್ ಮೂಲಕ ಟೆಂಡರ್‌ಗಳನ್ನು ಸಲ್ಲಿಸಬಹುದಾದ ದಿನಾಂಕ	02.05.2026 ರಿಂದ 11.05.2026 ಸಂಜೆ 5:00 ಗಂಟೆಯವರೆಗೆ	04.05.2026 ರಿಂದ 14.05.2026 ಸಂಜೆ 5:30 ಗಂಟೆಯವರೆಗೆ
2	ಕೆಪಿಪಿ–ಪೋರ್ಟಲ್ ಮೂಲಕ ಪೂರ್ಣಗೊಂಡ ಟೆಂಡರ್ ದಾಖಲೆಗಳನ್ನು ಸಲ್ಲಿಸಲು ಕೊನೆಯ ದಿನಾಂಕ.	11.05.2026 ಸಂಜೆ 5:00 ಗಂಟೆಯವರೆಗೆ	14.05.2026 ಸಂಜೆ 5:00 ಗಂಟೆಯವರೆಗೆ
3	ಕಾಮಗಾರಿಗಳ ಟೆಂಡರ್‌ಗಿಟ್ಟ ಮೊತ್ತ, ನಿಗದಿಪಡಿಸಿದ ಇ.ಎಂ.ಡಿ ಮೊತ್ತ, ಬಿಡ್ಡುದಾರರ ದರ್ಜೆ, ಟೆಂಡರ್ ನಿಯಮ, ಟೆಂಡರ್ ಪ್ರೋಸೆಸಿಂಗ್ ಶುಲ್ಕ ಇತ್ಯಾದಿ ವಿವರಗಳನ್ನು ಪಡೆಯಬಹುದಾದ ದಿನಾಂಕ	06.05.2026 ರ ಸಂಜೆ 3:00 ಗಂಟೆಯವರೆಗೆ	08.05.2026 ರ ಸಂಜೆ 3:00 ಗಂಟೆಯವರೆಗೆ
4	ಪ್ರಿ–ಬಿಡ್ ಮೀಟಿಂಗ್,	06.05.2026 ರಂದು ಬೆಳಗ್ಗೆ 11.00ಗಂಟೆಗೆ ಸ್ಥಳ: ವ್ಯವಸ್ಥಾಪಕ ನಿರ್ದೇಶಕ, ವಿಜನಿನಿ ಕಛೇರಿ, ಎಂಬಸ್ಸಿ ಸ್ಕ್ವಯರ್, ಬೆಂಗಳೂರು	08.05.2026ರಂದು ಬೆಳಗ್ಗೆ 11.00ಗಂಟೆಗೆ ಸ್ಥಳ: ಕಾರ್ಯಪಾಲಕ ಇಂಜಿನಿಯರ್, ಎತ್ತಿನಹೊಳೆ ಯೋಜನಾ, ವಿಭಾಗ ನಂ.4 ಮಧುಗಿರಿ ರವರ ಕಛೇರಿಯಲ್ಲಿ.
5	ತಾಂತ್ರಿಕ ಬಿಡ್ ಅನ್ನು ಕಾರ್ಯಪಾಲಕ ಇಂಜಿನಿಯರ್, ಎತ್ತಿನಹೊಳೆ ಯೋಜನಾ, ವಿಭಾಗ ನಂ.4 ಮಧುಗಿರಿ ರವರ ಕಛೇರಿಯಲ್ಲಿ ತೆರೆಯುವ ದಿನಾಂಕ	13.05.2026 ರಂದು ಬೆಳಿಗ್ಗೆ 11:00 ಗಂಟೆಗೆ	14.05.2026 ರಂದು ಬೆಳಿಗ್ಗೆ 11:00 ಗಂಟೆಗೆ
6	ಆರ್ಥಿಕ ಬಿಡ್ ಅನ್ನು ಕಾರ್ಯಪಾಲಕ ಇಂಜಿನಿಯರ್, ಎತ್ತಿನಹೊಳೆ ಯೋಜನಾ, ವಿಭಾಗ ನಂ.4 ಮಧುಗಿರಿ ರವರ ಕಛೇರಿಯಲ್ಲಿ ತೆರೆಯುವ ದಿನಾಂಕ	ತಾಂತ್ರಿಕ ಬಿಡ್ ಗೆ ಅನುಮೋದನೆ ದೊರೆತ ನಂತರ	ತಾಂತ್ರಿಕ ಬಿಡ್ ಗೆ ಅನುಮೋದನೆ ದೊರೆತ ನಂತರ

ಟೆಂಡರ್‌ಗಳನ್ನು ಸ್ವೀಕರಿಸುವ ಅಧಿಕಾರಿಯು ಯಾವುದೇ ಕಾರಣ ನೀಡದೆ ಯಾವುದೇ ಟೆಂಡರ್‌ಗಳನ್ನು ಅಥವಾ ಎಲ್ಲಾ ಟೆಂಡರ್‌ಗಳನ್ನು ತಿರಸ್ಕರಿಸುವ ಅಧಿಕಾರವನ್ನು ಹೊಂದಿರುತ್ತಾರೆ.

ಸಹಿ/– ಕಾರ್ಯಪಾಲಕ ಇಂಜಿನಿಯರ್,
ವಿಜನಿನಿ, ಎತ್ತಿನಹೊಳೆ ಯೋಜನಾ ವಿಭಾಗ ನಂ.4, ಮಧುಗಿರಿ

DIPR/TUM/55/KSMCA/2026-27